ಬಿನಾ ಸಂಸ್ಕಾರ್ ನಹೀ ಸಹಕಾರ್

ಬಿನಾ ಸಹಕಾರ್ ನಹೀ ಉದ್ಧಾರ್



# ಸಹಕಾರ ಭಾರತಿ-ಕರ್ನಾಟಕ

ನಂ. 4, 2ನೇ 'ಬಿ' ಕ್ರಾಸ್, ವಿಕಾಸನಗರ, ನಾಗಸಂದ್ರ, ಮೆಟ್ರೋ ನಿಲ್ದಾಣದ ಎದುರು,
ಅಂಚೆ : ನಾಗಸಂದ್ರ ಬೆಂಗಳೂರು-560071.





# ಲಕ್ಷ್ಮಣ್ ರಾವ್ ಇನಾಮದಾರ್

ಲಕ್ಷ್ಮಣರಾವ್ ಮಾಧವರಾವ್ ಇನಾಮ್ದಾರ್ (ವಕೀಲ ಸಾಬ್) ಅವರು 1917ರಲ್ಲಿ ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಖಟಾವ್ ಗ್ರಾಮದಲ್ಲಿ ಜನಿಸಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ನಾಯಕ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಆತ್ಮೀಯ ಗುರು ಮಾರ್ಗದರ್ಶಕರಾಗಿ ಹೆಸರಾದವರು. ಸಹಕಾರ ಚಳವಳಿಯಲ್ಲಿ ಮಹತ್ತರ ಕೊಡುಗೆ ನೀಡಿದ ಅವರು ಸಹಕಾರ ಭಾರತೀ ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದು, ಅವರ ಹೆಸರಿನಲ್ಲಿ "ಲಕ್ಷ್ಮಣರಾವ್ ಇನಾಮ್ದಾರ್ ರಾಷ್ಟ್ರೀಯ ಸಹಕಾರಿ ಸಂಶೋಧನೆ ಮತ್ತು ಅಭಿವೃದ್ಧಿ ಅಕಾಡೆಮಿ (LINAC)" ಸ್ಥಾಪಿಸಲಾಗಿದೆ. ಶಿಸ್ತು, ಸರಳತೆ ಮತ್ತು ಸಮಾಜಸೇವೆಯ ಸಂಕೇತವಾಗಿ ಹೆಸರು ಮಾಡಿದ್ದ ಅವರು 1985ರಲ್ಲಿ ನಿಧನರಾದರೂ, ಅವರ ಸೇವಾ-ಸಂಸ್ಕಾರಗಳು ಇಂದಿಗೂ ಅನೇಕರಿಗೆ ಪ್ರೇರಣೆಯಾಗಿದೆ.

# ಸಹಕಾರ ಗೀತೆ

ಸಮಾಜವೇ ನಮ್ಮ ಆರಾಧ್ಯದೈವವು, ಸೇವೆಯೆ ನಿಜ ಆರಾಧನೆ
ಭಾರತಮಾತೆಯು ವಿಭವದಿ ಮೆರೆಯಲು, ಸಹಕಾರತತ್ವವೆ ಸಾಧನ ।
ಸಹಕಾರತತ್ವವೆ ಸಾಧನ । ಪ ।

ಸಮಾಜದಿಂದಲೆ ಸಂಸ್ಕೃತಿಯೆನ್ನುವ ಘನನಿಧಿ ನಮಗೆ ದೊರಕಿಹುದು
ಧನ, ಜ್ಞಾನದ ಬೆಲೆಬಾಳುವ ಗಣಿಯು ಸಮಾಜದಿಂದಲೆ ಲಭಿಸಿಹುದು
ಸಮಾಜ ಋಣದಿಂ ಮುಕ್ತರಾಗಲು, ಪಡೆದುದ ಮರಳಿ ನೀಡೋಣ
ಭಾರತಮಾತೆಯು ವಿಭವದಿ ಮೆರೆಯಲು, ಸಹಕಾರತತ್ವವೆ ಸಾಧನ ।
ಸಹಕಾರತತ್ವವೆ ಸಾಧನ ॥1॥


ಸದವಕಾಶ ಎಲ್ಲರಿಗೂ ಸಿಗಲಿ ಉಪೇಕ್ಷಿತರಾರೂ ಇರದಿರಲಿ
ಶಿಕ್ಷಣ, ಸ್ವಾಸ್ಥ್ಯ, ಸುಸಂಸ್ಕೃತಿ ಪಡೆದು, ಸಮರ್ಥ ಸುರಕ್ಷಿತರಾಗಿರಲಿ
ದಯೆಯಲ್ಲವು, ಉಪಕಾರವಲ್ಲವಿದು, ಆತ್ಮೀಯತೆಯ ಭಾವನೆ
ಭಾರತಮಾತೆಯು ವಿಭವದಿ ಮೆರೆಯಲು, ಸಹಕಾರತತ್ವವೆ ಸಾಧನ ।
ಸಹಕಾರತತ್ವವೆ ಸಾಧನ ॥ 2 ॥

ಭಾಷೆ, ಪ್ರಾಂತ್ಯ, ಜಾತಿಯು ಬೇರಾದರೂ, ಭಾರತಮಾತೆಯ ಮಕ್ಕಳೆಲ್ಲಾ
ಗ್ರಾಮ, ನಗರ, ವನವಾಸಿ ಮನುಜರು, ಬಂಧುಗಳಂತೆಯೆ ನಾವೆಲ್ಲಾ
ಜನತೆಯ ಸುಖದಲ್ಲಿಯೇ ಇದೆಯೆಲ್ಲವು, ಸಮಾಜ ಸುಖದಾಧಾರಣೆ
ಭಾರತಮಾತೆಯು ವಿಭವದಿ ಮೆರೆಯಲು, ಸಹಕಾರತತ್ವವೆ ಸಾಧನ ।
ಸಹಕಾರತತ್ವವೆ ಸಾಧನ ॥ 3 ।

**ಹಿಂದಿ ಮೂಲ ರೂಪ : ಶ್ರೀ ಕೃಷ್ಣ ಕೊಲ್ಹಾಪುರೆ**
**ಕನ್ನಡ ರೂಪ : ಶ್ರೀ ಸುಬ್ರಾಯ ಚೊಕ್ಕಾಡಿ**

# ಮಾನನೀಯ ಶ್ರೀ ಲಕ್ಷ್ಮಣ ರಾವ್ ಇನಾಂದಾರ್ ಯಾನೆ ವಕೀಲ್ ಸಾಬ್

## (1917–1985)



ಶ್ರೀ ಲಕ್ಷ್ಮಣ ರಾವ್ ಇನಾಂದಾರ್ ಅವರ ಜನನ **1917ರ ಸಪ್ಟೆಂಬರ್** 21 ಋಷಿ ಪಂಚಮಿಯ ದಿನ ಆಯಿತು. ಏಳು ಜನ ಸಹೋದರರಲ್ಲಿ ಮೂರನೆಯವರಾಗಿದ್ದು, ಮೂರು ಜನ ಸಹೋದರಿಯರನ್ನು ಹೊಂದಿದ್ದರು. ಮೂಲತಃ ಮಹಾರಾಷ್ಟ್ರದ ಸತಾರಾ ಜಿಲ್ಲೆಯುವರಾಗಿದ್ದ ಶ್ರೀ ಇನಾಂದಾರ್ ಅವರು ನ್ಯಾಯವಾದಿ ಯಾಗಿ ವೃತ್ತಿ ಜೀವನವನ್ನು ನಡೆಸುತ್ತಿದ್ದರು. ಉನ್ನತ ಮೌಲ್ಯಗಳಿಂದ ಕೂಡಿದ ಸಹಕಾರ ಚಳುವಳಿಯಿಂದ ಜನ ಸಾಮಾನ್ಯರ ಜೀವನಮಟ್ಟದಲ್ಲಿ ಸುಧಾರಣೆ ಮಾತ್ರವಲ್ಲ ತನ್ಮೂಲಕ ದೇಶದ ಸಮಗ್ರ ಅಭಿವೃದ್ಧಿ ಸಾಧ್ಯ ಎಂಬುವುದು ಅವರ ದೃಷ್ಟಿಕೋನವಾಗಿತ್ತು. ಹಾಗೆಯೇ **1978ರಲ್ಲಿ** ಸಹಕಾರ ಭಾರತಿಯ ಉದಯವಾದಾಗ ಅದರ ಪ್ರೇರಕ ಶಕ್ತಿಯಾಗಿ ಮುಂಚೂಣಿಯಲ್ಲಿ ಕೆಲಸ ಮಾಡಿದ್ದರು.

ಶ್ರೀ ಲಕ್ಷ್ಮಣ ರಾವ್ ಇನಾಂದಾರ್‌ರವರು ವಕೀಲಗಿರಿ ಮಾಡುತ್ತಿದ್ದ ಕಾರಣಕ್ಕೆ ಎಲ್ಲರ ಬಾಯಲ್ಲಿ **'ವಕೀಲ ಸಾಹೇಬ್ರು'** ಅಂತಲೇ ಕರೆಸಿಕೊಳ್ಳುತ್ತಿದ್ದರು. ತನ್ನ ಸಾಮಾಜಿಕ ಜೀವನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ಗುಜರಾತ್ ರಾಜ್ಯದಲ್ಲಿ ಸಂಘಕಾರ್ಯದೊಂದಿಗೆ ತನ್ನನ್ನು ತೊಡಗಿಸಿಕೊಂಡಿದ್ದರು. ಅಂದಿನ ದಿನದಲ್ಲಿ ಬಾಲ ಸ್ವಯಂಸೇವಕರಾಗಿದ್ದ ಇಂದಿನ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಗೆ ಎಳವೆಯಲ್ಲಿಯೇ ಪ್ರೇರಣೆ ಮತ್ತು ಚೈತನ್ಯವನ್ನು ತುಂಬುವ ಕೆಲಸವನ್ನು ಮಾಡಿದ್ದರು. **1985ರಲ್ಲಿ ತನ್ನ 67ನೇ ವಯಸ್ಸಿನಲ್ಲಿ** ಶ್ರೀ ಲಕ್ಷ್ಮಣ ರಾವ್ ಇನಾಂದಾರ್ ಮಹಾರಾಷ್ಟ್ರದ ಪುಣೆಯಲ್ಲಿ ನಿಧನ ಹೊಂದಿದರು.

ಆದರೆ ತನ್ನ ನಿಧನ ಪೂರ್ವದ 5 ವರ್ಷಗಳಲ್ಲಿ ಸಹಕಾರ ಭಾರತಿಯ ಕೆಲಸ ಕಾರ್ಯದ ವಿಸ್ತರಣೆಗಾಗಿ ದೇಶದಾದ್ಯಂತ ನಿರಂತರ ಪ್ರವಾಸ ಮಾಡಿದರು. ಇದರಿಂದ ಸಹಕಾರ ಭಾರತಿಗೆ ದೇಶದಾದ್ಯಂತ ಸಂಘಟನಾತ್ಮಕವಾಗಿ ನೆಲೆ ವಿಸ್ತರಿಸಲು ಸಾಧ್ಯವಾಯಿತು. ತತ್ಪರಿಣಾಮ ಇಂದು ದೇಶದ ಎಲ್ಲಾ ರಾಜ್ಯಗಳ ಸುಮಾರು **650ಕ್ಕೂ ಮಿಕ್ಕಿ ಜಿಲ್ಲೆಗಳಲ್ಲಿ 30,000ಕ್ಕೂ** ಹೆಚ್ಚು ಸಹಕಾರ ಸಂಘಗಳ ಸಂಪರ್ಕ ಸಾಧಿಸಲು ಸಾಧ್ಯವಾಗಿ ಒಂದು ಪ್ರಭಾವಿ ಸಹಕಾರಿ ಸಂಘಟನೆಯಾಗಿ ಸಹಕಾರ ಭಾರತಿಯು ಮೂಡಿ ಬರಲು ಸಾಧ್ಯವಾಯಿತು. ದಿವಂಗತ ಲಕ್ಷಣ ರಾವ್ ಇನಾಂದಾರ್ ಯಾನೆ ವಕೀಲ ಸಾಹೇಬ್ರು ಇವರ ಜನ್ಮ ಶತಮಾನೋತ್ಸವವು **2017ರಲ್ಲಿ** ದೇಶದಾದ್ಯಂತ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ಸಂಘಟನೆಯ ವಿಚಾರ ಮತ್ತು ಕಾರ್ಯದ ವಿಸ್ತಾರಕ್ಕಾಗಿ ಸಹಕಾರ ಭಾರತಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಜನ್ಮ ಶತಮಾನೋತ್ಸವದ ಸಂದರ್ಭವನ್ನು ಸ್ಮರಣೀಯಗೊಳಿಸಲು ಸಹಕಾರಿ ಕಾರ್ಯಕರ್ತರಿಗೆ ಅನುಕೂಲವಾಗುವಂತೆ **'ಸಹಕಾರ ಭಾರತಿ ಪರಿಚಯ – ವೈಚಾರಿಕ ತಳಹದಿ'**ಯ ಕಿರು ಹೊತ್ತಿಗೆಯನ್ನು ಹೊರತರಲಾಯಿತು.

**ಮಾಹಿತಿ ಕೈಪಿಡಿ**

## ಸಹಕಾರ ಭಾರತಿಯ ಪ್ರಾರಂಭ ಮತ್ತು ಹಿನ್ನೆಲೆ

**1975ರ ಜೂನ್** ತಿಂಗಳಿನಲ್ಲಿ ಅಂದಿನ ಕೇಂದ್ರ ಸರಕಾರ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿತು. ಮಧ್ಯರಾತ್ರಿಯಿಂದಲೇ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಮೊಟಕುಗೊಳಿಸಲಾಯಿತು. ಸುಮಾರು 28 ಸುದೀರ್ಘ ವರ್ಷಗಳ ವಿಶ್ವಮಾದರಿ ಪ್ರಜಾಪ್ರಭುತ್ವ ವ್ಯವಸ್ಥೆಯ ಕಗ್ಗೊಲೆಯಾಯಿತು. ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಬಂಧಿಸಲಾಯಿತು. ವಿರೋಧಿಸಿದ ಅನೇಕ ಸಾಮಾಜಿಕ, ಸಾಂಸ್ಕೃತಿಕ ಸಂಘಟನೆಗಳನ್ನು ದೇಶವ್ಯಾಪಿ ನಿಷೇಧಿಸಲಾಯಿತು. ಪತ್ರಿಕಾ ಮಾಧ್ಯಮವನ್ನು ಸರಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತು. ಸರಕಾರದ ವಿರುದ್ಧ ಧ್ವನಿ ಎತ್ತಿದ ಸಾವಿರಾರು ತುರ್ತುಪರಿಸ್ಥಿತಿ ವಿರೋಧಿ ಹೋರಾಟಗಾರರನ್ನು ಬಂಧಿಸಿ ಜೈಲಿಗೆ ನೂಕಿ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಯಿತು. ಸ್ವಾತಂತ್ರ್ಯ ನಂತರದ ದೇಶದ ಇತಿಹಾಸದಲ್ಲಿ ತುರ್ತುಪರಿಸ್ಥಿತಿ ಒಂದು ದೊಡ್ಡ ಕಪ್ಪು ಚುಕ್ಕೆಯಾಗಿ ದಾಖಲಾಯಿತು. ಒಂದರ್ಥದಲ್ಲಿ ಇದು ಎರಡನೆಯ ಸ್ವಾತಂತ್ರ್ಯ ಸಂಗ್ರಾಮ ಎಂದರೂ ತಪ್ಪಾಗಲಾರದು. ಹೀಗೆ ಜೈಲು ಪಾಲಾದ, ಭೂಗತರಾದ ಲಕ್ಷಾಂತರ ಹೋರಾಟಗಾರರ ಕೌಟುಂಬಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ಕಂಗೆಟ್ಟು ಹೋಯಿತು. ಅಂತಹ ಸಂದರ್ಭದಲ್ಲಿ ಮಹಾರಾಷ್ಟ್ರದ ಜೈಲುಗಳಲ್ಲಿ ಸಹಕಾರ ಕ್ಷೇತ್ರದ ಬಲವರ್ಧನೆಯ ಬಗ್ಗೆ ಚಿಂತನೆ ಪ್ರಾರಂಭವಾಯಿತು. ಸಹಕಾರ ಕ್ಷೇತ್ರದ ಮೂಲಕ ಪ್ರತಿಯೊಬ್ಬ ಸದಸ್ಯನ ಕುಟುಂಬದಲ್ಲಿ ಸಣ್ಣ ಸಣ್ಣ ಸ್ವಾವಲಂಬಿ ಆರ್ಥಿಕ ಚಟುವಟಿಕೆಗಳು ಸಾಧ್ಯ – ತನ್ಮೂಲಕ ದೇಶದ ಆರ್ಥಿಕ ಸ್ಪರ್ಧೆಯಲ್ಲಿ ಪ್ರತಿಯೊಬ್ಬನ ಭಾಗವಹಿಸುವಿಕೆಯಿಂದ ಗುಣಾತ್ಮಕ ಬದಲಾವಣೆಯಾಗಿ ದೇಶದ ಆರ್ಥಿಕಾಭಿವೃದ್ಧಿ ಸಾಧ್ಯವೆಂಬ ವಿಚಾರ ಮೂಡಿತು. ಇದರಿಂದ ಜನ ಸಾಮಾನ್ಯರಲ್ಲಿ ಆರ್ಥಿಕ ಶಿಸ್ತು ಮತ್ತು ಸ್ವಾವಲಂಬನೆ ಸಾಧ್ಯ ಎನ್ನುವ ಅಭಿಪ್ರಾಯ ಗಟ್ಟಿಯಾಯಿತು.

ಈ ಹಿನ್ನೆಲೆಯಲ್ಲಿ **'ಬಿನಾ ಸಂಸ್ಕಾರ್ ನಹೀ ಸಹಕಾರ್, ಬಿನಾ ಸಹಕಾರ್ ನಹೀ ಉದ್ಧಾರ್'** ಎನ್ನುವ ಮೂಲಮಂತ್ರವನ್ನು ಘೋಷ ವಾಕ್ಯವನ್ನಾಗಿಟ್ಟುಕೊಂಡು ಮಹಾರಾಷ್ಟ್ರದ ಹಿರಿಯ ಸಾಮಾಜಿಕ ಕಾರ್ಯಕರ್ತರಾದ ಮಾನನೀಯ ಶ್ರೀ ಲಕ್ಷ್ಮಣ್ ರಾವ್ ಇನಾಂದಾರರವರ ಮಾರ್ಗದರ್ಶನದಲ್ಲಿ ಮಾನನೀಯ ಶ್ರೀ ಮಾಧವ್ ರಾವ್ ಗೋಡ್ಬೋಲೆಯವರ ನೇತೃತ್ವದಲ್ಲಿ **1978 ಸೆಪ್ಟೆಂಬರ್ 15**. ಅನಂತ ಚತುರ್ದಶಿಯ ಪುಣ್ಯದಿನದಂದು ಸಹಕಾರ ಭಾರತಿಯು ಪೂನಾದಲ್ಲಿ ಜನ್ಮ ತಾಳಿತು. ಅಂದಿನಿಂದ

ಸಹಕಾರ ಸಂಘಗಳು, ಸಂಘಗಳ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ ಮತ್ತು ಸಹಕಾರಿ ಸದಸ್ಯರನ್ನು ಸಂಘಟಿಸಿಕೊಂಡು ಅವರಲ್ಲಿ ರಾಷ್ಟ್ರೀಯ ಚಿಂತನೆಯೊಂದಿಗೆ ಸಾಮಾಜಿಕ ಜವಾಬ್ದಾರಿಯ ತಿಳುವಳಿಕೆಯನ್ನು ಮೂಡಿಸುವ ಕೆಲಸವನ್ನು ಸಹಕಾರ ಭಾರತಿಯು ಮಾಡುತ್ತಿದೆ. ಪರಸ್ಪರ ಸಂಪರ್ಕ, ಸೇವೆ ಮತ್ತು ಸಮರ್ಪಣಾಭಾವದಿಂದ ಇದನ್ನು ಕಾರ್ಯರೂಪಕ್ಕಿಳಿಸಲಾಯಿತು. ಮೊದಲನೆಯದಾಗಿ ದೇಶದ ಸಾಮಾನ್ಯ ಜನರ ಅಂದರೆ ಸದಸ್ಯರಿಂದ ನಿಯಂತ್ರಿಸಲ್ಪಡುವ ಸಹಕಾರ ಸಂಘಗಳ ಮೂಲಕ ಆರ್ಥಿಕ ಚಟುವಟಿಕೆ ಆರಂಭಿಸುವುದು. ಅದರಿಂದ ಬಲಿಷ್ಠ ಆರ್ಥಿಕ ಕ್ಷಮತೆಯುಳ್ಳ ಸಹಕಾರ ಸಂಘಗಳ ಸ್ಥಾಪನೆ ಸಾಧ್ಯವಾಗುತ್ತದೆ. ತನ್ಮೂಲಕ ದೇಶದ ಸರ್ವತೋಮುಖ ಪುನರುತ್ಥಾನ ಸಾಧ್ಯ ಎನ್ನುವ ರಚನಾತ್ಮಕ ದೃಷ್ಟಿಕೋನ ಸಹಕಾರ ಭಾರತಿಯದ್ದು, ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳಲ್ಲಿ ಇಂತಹ ರಚನಾತ್ಮಕ ದೃಷ್ಟಿಕೋನವನ್ನು ತುಂಬುವುದು. ಅಂತಹ ವ್ಯಕ್ತಿಗಳಲ್ಲಿ ಸಮಗ್ರ ರಾಷ್ಟ್ರೀಯ ಭಾವನೆ ಮತ್ತು ಸಾಮಾಜಿಕ ಜವಾಬ್ದಾರಿಯ ಪರಿಕಲ್ಪನೆಯನ್ನು ಮೂಡಿಸುವುದು ಹಾಗೂ ಈ ವಿಚಾರಧಾರೆಯಿಂದ ಕೂಡಿದ ವ್ಯಕ್ತಿಗಳ ಗುಂಪು ನಿರ್ಮಾಣ ಮಾಡಿ ರಾಷ್ಟ್ರದ ಶಕ್ತಿಯನ್ನಾಗಿ ಪರಿವರ್ತಿಸುವ ಮಹತ್ಕಾರ್ಯ ಸಹಕಾರ ಭಾರತಿಯಿಂದಾಗುತ್ತಿದೆ.

ಸಹಕಾರ ಅಭಿವೃದ್ಧಿಯ ಮೂಲಕ ದೇಶದ ಆರ್ಥಿಕ ಉತ್ಥಾನ, ಆರ್ಥಿಕವಾಗಿ ದುರ್ಬಲರಾಗಿರುವ ನಾಗರಿಕರಿಗೆ ಸಾಂತ್ವನ, ಆರ್ಥಿಕ ಕ್ಷಮತೆಯುಳ್ಳ ಸಹಕಾರಿ ಸಂಸ್ಥೆಗಳ ರಚನೆ ಮತ್ತು ಸುಯೋಗ್ಯ ಸಂಸ್ಕಾರಯುತ ಕಾರ್ಯಕರ್ತರ ಸಂಘಟನೆ ಹಾಗೂ ಸಹಕಾರಿಗಳಲ್ಲಿ ರಾಷ್ಟ್ರೀಯತೆ ಮತ್ತು ಸಾಮಾಜಿಕ ಜವಾಬ್ದಾರಿಗಳ ತಿಳುವಳಿಕೆಯನ್ನು ಮೂಡಿಸುವಂತಹ ಸ್ಪಷ್ಟಗುರಿ ಸಹಕಾರ ಭಾರತಿಯದು.

* * *

# ಸಹಕಾರ ಭಾರತಿ ಸಂಕ್ಷಿಪ್ತ ಪರಿಚಯ

ಸಹಕಾರ ಭಾರತಿ ಸಹಕಾರ ಕ್ಷೇತ್ರದ ಏಕೈಕ ಸರಕಾರೇತರ ಸಂಘಟನೆ. ವಿಶ್ವದ ಸುದೀರ್ಘ ಸಹಕಾರಿ ಇತಿಹಾಸದಲ್ಲಿ ಸಹಕಾರ ಸಂಘಗಳು, ಸಂಘಗಳ ನಿರ್ದೇಶಕರು, ಸದಸ್ಯರು, ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗ ಇವರನ್ನೆಲ್ಲಾ ಒಟ್ಟಾಗಿ ಪ್ರತಿನಿಧಿಸುವ ಯಾವುದೇ ಸಂಘಟನೆ ಇಲ್ಲ. ಒಂದು ಸರಕಾರೇತರ ಸಂಘಟನೆಯಾಗಿ ಸಹಕಾರ ಕ್ಷೇತ್ರದಲ್ಲಿ ಈ ಮಹತ್ವದ ಕಾರ್ಯವನ್ನು ಸಹಕಾರ ಭಾರತಿಯು **1978** ರಿಂದ ಇಂದಿನವರೆಗೆ ನಿರಂತರವಾಗಿ ಮಾಡುತ್ತಿದೆ. ಸಹಕಾರ ಕ್ಷೇತ್ರದ ಮೂಲಕ ಜನ ಸಮುದಾಯದ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿ ಮಾಡುವ ನಿಟ್ಟಿನಲ್ಲಿ ಇಡಿಯ ಸಹಕಾರಿ ಪರಿವಾರವೆ ದುಡಿಯುತ್ತಿದೆ.

ಸಹಕಾರ ರಂಗದ ವಿವಿಧ ಅಂಗಗಳಾದ ಸದಸ್ಯರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದ ಜೊತೆ ಕೆಲಸ ಮಾಡುತ್ತಾ ಗುಣಾತ್ಮಕ ಬದಲಾವಣೆಯೊಂದಿಗೆ ಸಹಕಾರ ಕ್ಷೇತ್ರಕ್ಕೆ ಸಮರ್ಥ ನಾಯಕತ್ವವನ್ನು ಸಹಕಾರ ಭಾರತಿ ನೀಡುತ್ತಿದೆ. ತನ್ನ ರಚನಾತ್ಮಕ ಕಾರ್ಯಗಳ ಮುಖಾಂತರ ರಾಷ್ಟ್ರಹಿತ ಮತ್ತು ಸಮಾಜ ಹಿತದೊಂದಿಗೆ ತನ್ನ ಸ್ವಂತಹಿತವನ್ನು ಕಾಣಬೇಕೆಂಬ ಮನೋಭಾವನೆಯನ್ನು ಸಾವಿರಾರು ಸಹಕಾರಿಗಳಲ್ಲಿ ಮೂಡಿಸುತ್ತಾ ಸಹಕಾರ ಕ್ಷೇತ್ರದಲ್ಲಿ ಕಾಡುತ್ತಿರುವ ಹೊಸ ಸವಾಲುಗಳನ್ನು ಎದುರಿಸಲು ಕಾರ್ಯಕರ್ತರನ್ನು ಸಿದ್ಧಗೊಳಿಸುತ್ತಿದೆ.

ಸಹಕಾರ ಕ್ಷೇತ್ರದಲ್ಲಿ ತೊಡಗಿರುವ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ರಚನಾತ್ಮಕ ದೃಷ್ಟಿಕೋನವನ್ನು ಬೆಳೆಸಿ ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ಪುನರ್‌ನಿರ್ಮಾಣ ಸಾಧ್ಯವಾಗಬೇಕೆಂಬುದು ಸಹಕಾರ ಭಾರತಿಯ ಕನಸು. ಸಹಕಾರಿ ಕಾರ್ಯಕರ್ತರಲ್ಲಿ ಸಂಸ್ಕಾರವನ್ನು ಬಿತ್ತಿ ಸಹಕಾರ ಮನೋಭಾವನೆಯನ್ನು ಬೆಳೆಸುವುದರಿಂದ ಸಮಾಜದ ಮತ್ತು ದೇಶದ ಅಭಿವೃದ್ಧಿ ಸಾಧ್ಯವಿದೆ ಎಂಬ ನಂಬಿಕೆ ಸಹಕಾರ ಭಾರತಿಯದು. ಯಾವುದೇ ಪಕ್ಷ ರಾಜಕಾರಣದಿಂದ ಮುಕ್ತವಾಗಿ ತನ್ನ ಸ್ವತಂತ್ರ ನೆಲೆಯಲ್ಲಿ ದೇಶದಾದ್ಯಂತ ಕಾರ್ಯ ವಿಸ್ತಾರಗೊಳಿಸುತ್ತಿರುವ ದೇಶದ ಒಂದು ವಿಶಿಷ್ಟ ಸಂಘಟನೆಯಾಗಿ ಸಹಕಾರ ಭಾರತಿ ಎದ್ದು ಕಾಣುತ್ತಿದೆ.

* * *

# ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ಪುನರ್‌ನಿರ್ಮಾಣ

1947ರಲ್ಲಿ ದೇಶವು ಬ್ರಿಟೀಷರ ಮುಷ್ಟಿಯಿಂದ ಮುಕ್ತಗೊಂಡಾಗ ಬಹುಕಾಲದ ದಾಸ್ಯವು ಸಮಾಪ್ತಿಯಾಯಿತು. ಸುಸಂಘಟಿತ ಹಾಗೂ ಸಂಪದ್ಭರಿತವಾಗಿ ಬೆಳೆಯಲು ಭಾರತಕ್ಕೆ ಹೊಸದೊಂದು ಅವಕಾಶ ತೆರೆದುಕೊಂಡಿತು. ಈ ನಿಟ್ಟಿನಲ್ಲಿ ನಡೆಯುವ ಮತ್ತು ನಡೆಯಬೇಕಾದ ಪ್ರಯತ್ನವನ್ನೇ **'ರಾಷ್ಟ್ರ ಪುನರ್‌ನಿರ್ಮಾಣ'** ಎನ್ನುತ್ತೇವೆ.

ಸ್ವಾತಂತ್ರ್ಯ ಚಳುವಳಿ ಎಂಬುದು ದೇಶದ ಪರಕೀಯ ಆಡಳಿತದ ಮುಕ್ತಿಯ ಆಂದೋಲನ, ರಾಜಕೀಯ ಸ್ವರಾಜ್ಯ ಸ್ಥಾಪನೆ ಇದರ ಒಂದು ಪ್ರಮುಖ ಘಟ್ಟ, ರಾಜಕೀಯ ಸ್ವಾತಂತ್ರ್ಯದ ಸಂಪಾದನೆಯೊಂದಿಗೆ ಈ ಆಂದೋಲನ ಅಂತ್ಯಗೊಂಡಿದೆ ಎಂದು ಭಾವಿಸಲಾಗದು. ಈ ಆಂದೋಲನದ ಮುಂದಿನ ಹಂತಗಳು ಸ್ವಾವಲಂಬನೆ, ಗ್ರಾಮ ಸ್ವರಾಜ್ಯ, ವ್ಯವಸ್ಥಾ ಪರಿವರ್ತನೆ ಹಾಗೂ ರಾಷ್ಟ್ರೀಯ ಅಭಿವೃದ್ಧಿ, ಇವು ರಾಷ್ಟ್ರೀಯ ಆಂದೋಲನದ ದಾರಿಯಲ್ಲಿ ಎದುರಾಗಿರುವ ಹೊಸ ಸವಾಲುಗಳು. ಈ ಸವಾಲುಗಳಲ್ಲಿ ಅತ್ಯಂತ ಪ್ರಧಾನವಾದುದೇ ರಾಷ್ಟ್ರ ಪುನರ್‌ನಿರ್ಮಾಣ ಸವಾಲು.

**'ರಾಷ್ಟ್ರ ಪುನರ್‌ನಿರ್ಮಾಣ'** ಎಂದರೆ ಇದುವರೆಗೂ ಇದ್ದಿರದ ಹೊಸದೊಂದು ದೇಶವನ್ನು ನಿರ್ಮಾಣ ಮಾಡುವುದು ಎಂದರ್ಥವಲ್ಲ, ರಾಷ್ಟ್ರ ಪುನರ್‌ನಿರ್ಮಾಣದ ಕಾರ್ಯವೆಂದರೆ ರಾಷ್ಟ್ರೀಯ ಪುನರುತ್ಥಾನದ ಅಥವಾ ರಾಷ್ಟ್ರೀಯ ಪುನಶ್ಚೇತನದ ಕಾಯಕ. ಅದು ಆರೋಗ್ಯವನ್ನು ಕಳೆದುಕೊಂಡು ದುರ್ಬಲಗೊಂಡ ವ್ಯಕ್ತಿಯು ತನ್ನ ಆರೋಗ್ಯವನ್ನು ಮರಳಿ ಪಡೆದುಕೊಂಡು ಹೊಸ ಹುರುಪು ಮತ್ತು ಲವಲವಿಕೆಯಿಂದ ತನ್ನ ಕಾರ್ಯಗಳನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುವ ಪ್ರಕ್ರಿಯೆಗೆ ಸಮನಾದುದು. ಅನಾರೋಗ್ಯದಿಂದ ಪೀಡಿತನಾದವನ ಬದಲಿಗೆ ಇನ್ನೊಬ್ಬರನ್ನು ತರುವ ಪ್ರಯತ್ನ ಇಲ್ಲಿರುವುದಿಲ್ಲ. ಆತನನ್ನೇ ಸಶಕ್ತನನ್ನಾಗಿ ಚೈತನ್ಯಶೀಲರಾಗಿ ಮಾಡುವ ಪ್ರಕ್ರಿಯೆ ಆತನ ಸಕಲ ಶಕ್ತಿಯನ್ನು ಪುನರುದಿತಗೊಳಿಸುವುದು. ಇಲ್ಲಿ ನಡೆಯುವುದು ಪುನರ್‌ನಿರ್ಮಿತಿ. ಈ ಮಹತ್ವದ ಕೆಲಸವನ್ನು ಸಹಕಾರ ಭಾರತಿಯು ಸ್ವಾತಂತ್ರ್ಯ ಪೂರ್ವದಲ್ಲಿಯೇ ಹುಟ್ಟಿರುವ ಸಹಕಾರ ಚಳುವಳಿಯ ಭಾಗವಾಗಿರುವ ಸಹಕಾರ ಸಂಘಗಳು, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಮತ್ತು ಸದಸ್ಯರ ಮಧ್ಯೆ ತನ್ನ ರಚನಾತ್ಮಕ ಕಾರ್ಯಗಳ ಮುಖಾಂತರ ಮಾಡುತ್ತಿದೆ. ಈ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ವ್ಯಕ್ತಿಗಳಲ್ಲಿ ಸಂಸ್ಕಾರದಿಂದ ಕೂಡಿದ ಸೇವಾ ಮನೋಭಾವನೆಯನ್ನು ಬೆಳೆಸುವುದು, ಅವರಲ್ಲಿ ಯೋಗ್ಯ ನಾಯಕತ್ವವನ್ನು ನಿರ್ಮಾಣ ಮಾಡಿ ಅದರಿಂದ ಸಮಾಜಕ್ಕೆ ಶಕ್ತಿಯನ್ನು ತುಂಬುವುದು. ಈ ರೀತಿ ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ಪುನರ್‌ನಿರ್ಮಾಣದ ಮಹತ್ಕಾರ್ಯ ಸಾಧ್ಯವಿದೆ ಎಂಬ ನಂಬಿಕೆಯೊಂದಿಗೆ ಸಹಕಾರ ಭಾರತಿ ಕೆಲಸ ಮಾಡುತ್ತಿದೆ.

# ಸಹಕಾರ ಭಾರತಿಯ ಪ್ರಧಾನ ತಾತ್ವಿಕ ನೆಲೆಗಳು

ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ಪುನರ್‌ನಿರ್ಮಾಣದ ಕಾರ್ಯದ ಸಂದರ್ಭದಲ್ಲಿ ಸಹಕಾರಿ ಪರಿವಾರದಲ್ಲಿ ನಂಬಿಕೆಯಿರಿಸಿ, ಪಕ್ಷ ರಾಜಕಾರಣದಿಂದ ಮೇಲೆದ್ದು ರಾಷ್ಟ್ರೀಯ ದೃಷ್ಟಿಕೋನದಿಂದ ಕೂಡಿದ ರಚನಾತ್ಮಕ ಕಾರ್ಯಗಳ ಮುಖಾಂತರ ಸಮರ್ಥ ಸಹಕಾರಿ ಚಳುವಳಿಯನ್ನು ರೂಪಿಸುವುದು ಸಹಕಾರ ಭಾರತಿಯ ಉದ್ದೇಶವಾಗಿದೆ. ಈ ಉದ್ದೇಶದ ಸಾಕಾರದಲ್ಲಿ ಸಹಕಾರಿಯಾಗುವಂತಹ ಮೂರು ತಾತ್ವಿಕ ವಿಚಾರಗಳನ್ನು ಸಹಕಾರ ಭಾರತಿಯು ತನ್ನಲ್ಲಿ ಅಳವಡಿಸಿಕೊಂಡಿದೆ. ಅವು ಈ ಕೆಳಗಿನಂತಿವೆ.

1. **ಸಹಕಾರಿ ಪರಿವಾರ ಕಲ್ಪನೆಯಲ್ಲಿ ನಂಬಿಕೆ. (Co-operative Family assumption)**
2. **ಪಕ್ಷರಾಜಕಾರಣದಿಂದ ದೂರ – ರಾಷ್ಟ್ರ ರಾಜಕಾರಣ ಮೇಲೆ ನಂಬಿಕೆ. (Away from Party Politics)**
3. **ರಚನಾತ್ಮಕ ದೃಷ್ಟಿಕೋನ (Constructive Vision)**

1. **ಸಹಕಾರಿ ಪರಿವಾರ ಕಲ್ಪನೆಯಲ್ಲಿ ನಂಬಿಕೆ :** ಸಹಕಾರ ಭಾರತಿಯ ಕಾರ್ಯಕ್ಷೇತ್ರವು ಇಡೀ ಸಹಕಾರ ರಂಗವೇ ಆಗಿರುವುದರಿಂದ ಇಡಿಯ ಸಹಕಾರಿ ಸಮುದಾಯವನ್ನು ಸಂಘಟಿಸಿ ಪೋಷಿಸುವುದು ಇದರ ಪರಮ ಉದ್ದೇಶವಾಗಿದೆ. ಸಹಕಾರ ರಂಗದ ಬೇರೆ ಬೇರೆ ಘಟಕಗಳಾದ ಸಹಕಾರ ಸಂಘಗಳು, ಸಹಕಾರ ಇಲಾಖೆ, ಆಡಳಿತ ಮಂಡಳಿ, ಸದಸ್ಯರು, ಸಿಬ್ಬಂದಿ ವರ್ಗ ಇವರೆಲ್ಲರ ಸಮರ್ಥ ಭಾಗೀದಾರಿಕೆಯಿಂದಲೇ ಈ ಕ್ಷೇತ್ರದ ಯಶಸ್ಸು ಸಾಧ್ಯ. ಈ ಕ್ಷೇತ್ರದಲ್ಲಿ ಬರುವ ಬೇರೆ ಬೇರೆ ಘಟಕಗಳು ಪರಸ್ಪರ ಬೇರೆ ಬೇರೆಯಾಗದೆ, ವಿರೋಧಿಗಳಾಗಿರದೆ ಒಂದಕ್ಕೊಂದು ಪೂರಕವಾಗಿ ಅವಲಂಬಿತ ಭಾಗಗಳು ಎಂದು ಸಹಕಾರ ಭಾರತಿಯು ನಂಬುತ್ತದೆ. ಇಲ್ಲಿ ವರ್ಗ ಸಂಘರ್ಷದ ಅವಶ್ಯಕತೆ ಇಲ್ಲ. ಹೇಗೆ ಮನುಷ್ಯನ ದೇಹದ ಒಂದೊಂದು ಅವಯವಗಳು ಒಂದಕ್ಕೊಂದು ಪೂರಕವಾಗಿ ಕೆಲಸ ನಿರ್ವಹಿಸುತ್ತವೆಯೋ ಹಾಗೆಯೇ ಸಹಕಾರ ರಂಗದ ಎಲ್ಲಾ ಘಟಕಗಳು ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಘಟಕಗಳು. ಆದುದರಿಂದ ಈ ಕ್ಷೇತ್ರದ ಘಟಕಗಳಾದ ಸಹಕಾರ ಸಂಘಗಳು, ಆಡಳಿತ ಮಂಡಳಿ, ಸಿಬ್ಬಂದಿವರ್ಗ ಮತ್ತು ಸದಸ್ಯರನ್ನು ತನ್ನ ಸದಸ್ಯರನ್ನಾಗಿ ಮಾಡಿಕೊಂಡು ತನ್ನ ರಚನಾತ್ಮಕ ಕಾರ್ಯಕ್ರಮಗಳ ಮುಖಾಂತರ ಸಂಘಟಿಸುತ್ತದೆ. ಸಹಕಾರ ಇಲಾಖೆಯೊಂದಿಗೆ ನಿರಂತರ ಸಂಪರ್ಕ, ಸಂವಾದಗಳ ಮೂಲಕ ಇತರ ಘಟಕಗಳೊಂದಿಗೆ ಸೌಹಾರ್ದ ವಾತಾವರಣ ನಿರ್ಮಾಣದ ಕೆಲಸವನ್ನು ಮಾಡುತ್ತದೆ.

2. **ಪಕ್ಷ ರಾಜಕಾರಣದಿಂದ ದೂರ–ರಾಷ್ಟ್ರ ರಾಜಕಾರಣ ಮೇಲೆ ನಂಬಿಕೆ :** ಸಹಕಾರ ಭಾರತಿಯು ರಾಜಕೀಯ ಪಕ್ಷಗಳ ಹಿಡಿತದಿಂದ ಮುಕ್ತವಾಗಿರುವ ಸಂಘಟನೆಯಾಗಿದೆ. ಯಾವುದೇ ರಾಜಕೀಯ ಪಕ್ಷದ ಅಂಗ ಸಂಸ್ಥೆಯಾಗಿ ಕೆಲಸ ನಿರ್ವಹಿಸುವುದರಿಂದ

ವ್ಯವಸ್ಥಾ ಪರಿವರ್ತನೆ ಸಾಧ್ಯವಿಲ್ಲ. ರಾಜಕೀಯ ಪಕ್ಷಗಳ ಸಾಮಾನ್ಯ ಕಾರ್ಯಸೂಚಿಯಲ್ಲಿ ಅಧಿಕಾರಗ್ರಹಣ ಹೆಚ್ಚು ಮಹತ್ವವನ್ನು ಪಡೆಯುತ್ತದೆ. ಆದರೆ ಸಹಕಾರ ಕ್ಷೇತ್ರದ ಸಂಘಟನೆಯಾಗಿ ಸಂಸ್ಕಾರ ಮತ್ತು ಸೇವೆಯಿಂದ ಸಹಕಾರ ಸಂಘಗಳಿಂದ ಸಮಾಜ ದೇಶದ ಅಭಿವೃದ್ಧಿ ಸಾಧ್ಯ ಎನ್ನುವ ನಂಬಿಕೆಗೆ ರಾಜಕೀಯೇತರ ಅಸ್ತಿತ್ವದ ಅಗತ್ಯವನ್ನು ಸಹಕಾರ ಭಾರತಿ ಮನಗಂಡಿದೆ. ಹಾಗಾಗಿ ಸಹಕಾರ ಭಾರತಿ ಒಂದು ಸ್ವತಂತ್ರ ಸಂಘಟನೆಯಾಗಿ ತನ್ನ ಧ್ಯೇಯ ಧೋರಣೆಗಳನ್ನು ರೂಪಿಸುವುದು, ಕಾರ್ಯಕ್ರಮ, ಪ್ರಕಲ್ಪಗಳನ್ನು ನಿಶ್ಚಯಿಸಿ ಆಯೋಜಿಸುವುದು, ಸಂಘಟನೆಯ ಖರ್ಚಿಗೆ ಅಗತ್ಯ ನಿಧಿಗಳನ್ನು ಸಂಗ್ರಹಿಸಿ ಲೆಕ್ಕಪತ್ರಗಳನ್ನು ಇಡುವುದು ಮುಂತಾದವುಗಳನ್ನು ತಾನೇ ಮಾಡುತ್ತದೆ. ಸಹಕಾರ ಭಾರತಿಯು ಪಕ್ಷ ರಾಜಕಾರಣದಿಂದ (Party Politics) ದೂರವಾಗಿರುವುದಕ್ಕೆ ಬಯಸುತ್ತದೆಯೇ ವಿನಃ ರಾಷ್ಟ್ರ ರಾಜಕಾರಣ (National Politics) ದಿಂದ ಅಲ್ಲ. ಸಹಕಾರ ಭಾರತಿಗೆ ರಾಜಕೀಯ ಸಂಬಂಧವಾದ ಅಧಿಕಾರವನ್ನು ಕೈವಶಮಾಡಿಕೊಳ್ಳುವ ಯಾವುದೇ ಇರಾದೆ ಇಲ್ಲದೆ ಇರುವುದರಿಂದ, ರಾಜಕೀಯ ಸಂಬಂಧವಿಲ್ಲದೆ ಯಾವುದೇ ಸ್ವಾರ್ಥರಹಿತ ಸಮಾಜದ ಅಭಿವೃದ್ಧಿಗೆ, ದೇಶದ ಹಿತಾಸಕ್ತಿಗೆ ಪೂರಕವಾದ ರಾಷ್ಟ್ರ ರಾಜಕಾರಣದಲ್ಲಿ ಸಕ್ರಿಯವಾಗಿರುತ್ತದೆ.

ರಾಷ್ಟ್ರ ರಾಜಕಾರಣ ಅಂದರೆ ರಾಷ್ಟ್ರೀಯ ಹಿತಾಸಕ್ತಿ ಮತ್ತು ದೇಶದ ಸಾರ್ವಭೌಮತೆಗೆ ಪೂರಕವಾಗಿರುವುದು. ದೇಶದ ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಅನುಗುಣವಾಗಿರುವುದು. ದೇಶದ ಅಭಿವೃದ್ಧಿಗೆ ನೆರವಾಗುವುದು, ಪ್ರಾಕೃತಿಕ ವಿಕೋಪಗಳಿಗೆ ಸ್ಪಂದಿಸುವುದು ಮುಂತಾದ ವಿಷಯಗಳಲ್ಲಿ ಸಹಕಾರ ಭಾರತಿಯು ಸದಾ ಮುಂಚೂಣಿಯ ಪಾತ್ರ ನಿರ್ವಹಿಸುತ್ತಿದೆ. ಉದಾಹರಣೆಗೆ ಕೇದಾರನಾಥದಲ್ಲಿ ಮೇಘ ಸ್ಫೋಟದಿಂದಾಗಿ ಜಲಪ್ರಳಯ ಸಂದರ್ಭದಲ್ಲಿ ಸಹಕಾರ ಭಾರತಿಯ ನೇತೃತ್ವದಲ್ಲಿ ದೇಶದ ಹಲವಾರು ಸಹಕಾರ ಸಂಘಗಳು ಸಹಕಾರಿಗಳು ಸಹಾಯ ಹಸ್ತವನ್ನು ನೀಡಿದ್ದಾರೆ. ಹಾಗೆಯೇ ದೇಶದ ಪ್ರಧಾನಿಯವರಾದ ಶ್ರೀ ನರೇಂದ್ರ ಮೋದಿಯವರ **'ಸ್ವಚ್ಛ ಭಾರತ'** ಕಾರ್ಯಕ್ರಮಕ್ಕೆ ಕೈಜೋಡಿಸುವಂತೆ ದೇಶದ ಜನತೆಗೆ ಕರೆ ನೀಡಿದಾಗ ಅದನ್ನು ಸ್ವೀಕರಿಸಿ ಸಹಕಾರ ಸಂಘಗಳು ಸಕ್ರಿಯ ಪಾತ್ರ ನಿರ್ವಹಿಸುವಂತೆ ಮಾಡುವಲ್ಲಿ ಸಹಕಾರ ಭಾರತಿಯು ಪ್ರಮುಖ ಪಾತ್ರ ನಿರ್ವಹಿಸಿದೆ.

3. **ರಚನಾತ್ಮಕ ದೃಷ್ಟಿಕೋನ :** ರಾಷ್ಟ್ರ ಪುನರ್‌ನಿರ್ಮಾಣದ ಕಾರ್ಯವನ್ನು ವ್ಯಕ್ತಿ ನಿರ್ಮಾಣದ ಮೂಲಕ ಕೈಗೆತ್ತಿಕೊಳ್ಳುವಲ್ಲಿ ರಾಷ್ಟ್ರೀಯ ದೃಷ್ಟಿಕೋನದಿಂದ ಕೂಡಿದ ರಚನಾತ್ಮಕ ಮಾನಸಿಕತೆ ಅತಿ ಅಗತ್ಯ ರಾಷ್ಟ್ರೀಯ ದೃಷ್ಟಿಕೋನ ಎಂದರೆ ಇದೊಂದು ಬಗೆಯ ಮಾನಸಿಕತೆ, ರಾಷ್ಟ್ರ ಹಿತಕ್ಕಾಗಿ ದುಡಿಯುವ, ವೈಯಕ್ತಿಕ ಹಾಗೂ ರಾಷ್ಟ್ರೀಯ ಚಾರಿತ್ರ್ಯವನ್ನು ರೂಪಿಸಿಕೊಳ್ಳಲು ಸಮರ್ಪಣಾ ಭಾವದಿಂದ ಸಾಮಾಜಿಕ ಕಾರ್ಯ ಮಾಡುವ ಹಾಗೂ ಸಾಮಾಜಿಕ ಹೊಣೆಯರಿತು ವ್ಯವಹರಿಸುವ ಇವೇ ಮುಂತಾದ ಗುಣಗಳು ಈ ಮಾನಸಿಕತೆಯಲ್ಲಿವೆ.

ರಾಷ್ಟ್ರೀಯ ಭಾವನೆಯ ಬಗೆಗಿನ ರಚನಾತ್ಮಕ ದೃಷ್ಟಿಕೋನವು ಸಹಕಾರಿ ಕಾರ್ಯಕರ್ತರಲ್ಲಿ ಸಾಮಾಜಿಕ ಕಾರ್ಯದ ಹಿಂದಿನ ಪ್ರೇರಣಾ ಶಕ್ತಿಯಾಗಿರುವುದು. ಈ ಭಾವನೆಯಲ್ಲಿ ನಾಲ್ಕು ಸ್ವರೂಪದ ಅಂಶಗಳು ಸೇರಿಕೊಳ್ಳುತ್ತದೆ, ಅವು ಯಾವುದೆಂದರೆ,

**(ಅ) ಮಾತೃಭೂಮಿಯ ಬಗೆಗಿನ ಭಕ್ತಿ ಭಾವ.**

**(ಆ) ಸಹ–ರಾಷ್ಟ್ರೀಯರ ಕುರಿತು ಅನನ್ಯ ಭಾವ ಹಾಗೂ ಆತ್ಮೀಯತೆ.**

**(ಇ) ರಾಷ್ಟ್ರದ ಐತಿಹಾಸಿಕ ಪರಂಪರೆ ಹಾಗೂ ಸಂಸ್ಕೃತಿಯಲ್ಲಿ ಅಭಿಮಾನ ಸಹಿತವಾದ ಗೌರವ ಭಾವ.**

**(ಈ) ರಾಷ್ಟ್ರದ ಸಾಂಸ್ಕೃತಿಕ ಜೀವನ ಮೌಲ್ಯಗಳಲ್ಲಿ ನಿಷ್ಠೆಯ ಭಾವ.**

ಈ ಮೇಲಿನ ಭಾವನೆಯನ್ನು ಹೊಂದಿರುವ ಸಹಕಾರಿ ಕಾರ್ಯಕರ್ತರಲ್ಲಿ ತಾತ್ವಿಕವಾಗಿ ರಚನಾತ್ಮಕ ದೃಷ್ಟಿಕೋನವನ್ನು ಮತ್ತು ಕ್ರಿಯಾತ್ಮಕವಾಗಿ ರಚನಾತ್ಮಕ ಕಾರ್ಯವನ್ನು ಸಹಕಾರ ಭಾರತಿ ಬೆಳೆಸುತ್ತದೆ. ಯಾವುದೇ ವಿಷಯಗಳಿಗೆ ತಕ್ಷಣವೇ ಸ್ಪಂದಿಸುವ ಮನೋಭಾವ, ಕರ್ತವ್ಯ ಭಾವನೆ ಮತ್ತು ಸಕಾರಾತ್ಮಕ ವಿಚಾರವೇ 'ರಚನಾತ್ಮಕ ದೃಷ್ಟಿಕೋನ. ಒಬ್ಬೊಬ್ಬ ವ್ಯಕ್ತಿಗೂ ಉತ್ತಮ ಸಂಸ್ಕಾರ ದೊರೆತು ಆತನಲ್ಲಿ ಗುಣವಿಕಾಸವಾಗಿ ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರೀಯ ಚಾರಿತ್ರ್ಯದ ನಿರ್ಮಾಣವಾದಾಗಲೇ ಸಮೃದ್ಧ ಹಾಗೂ ಸಂಪದ್ಭರಿತ ರಾಷ್ಟ್ರ ನಿರ್ಮಾಣ ಸಾಧ್ಯ ಎಂಬ ನಂಬಿಕೆ ಈ ವಿಚಾರದಲ್ಲಿದೆ.

ಪ್ರತಿಯೊಬ್ಬರಲ್ಲೂ ಕರ್ತವ್ಯ ಭಾವನೆ ಜಾಗೃತವಾದಾಗ ದೇಶದಿಂದ ನನಗೆ ಏನು ಸಿಕ್ಕೀತು ಎಂಬುದಕ್ಕಿಂತ ದೇಶಕ್ಕಾಗಿ ಸಮಾಜಕ್ಕಾಗಿ ನಾನೇನು ಮಾಡಬಲ್ಲೆ ಎಂಬ ಹೊಣೆಗಾರಿಕೆಯ ವಿಚಾರ ಮೂಡಿಬರುವುದು, ಕರ್ತವ್ಯ ಭಾವನೆ ಜಾಗೃತವಾಗಿ ದೇಶಭಕ್ತಿ, ಅನುಶಾಸನ, ಸಚ್ಚಾರಿತ್ರ್ಯ ಹಾಗೂ ಸಾಮಾಜಿಕ ಕಳಕಳಿ ಬೆಳೆಯುತ್ತದೆ. ಇದು ವ್ಯಕ್ತಿ ನಿರ್ಮಾಣ. ವ್ಯಕ್ತಿನಿರ್ಮಾಣ ಸಾಧನೆಗಾಗಿ ರಚನಾತ್ಮಕ ದೃಷ್ಟಿಕೋನದಿಂದ ಕೂಡಿದ ಹತ್ತಾರು ರೀತಿಯ ರಚನಾತ್ಮಕ ಕಾರ್ಯಕ್ರಮಗಳನ್ನು ಸಹಕಾರ ಭಾರತಿ ಹಮ್ಮಿಕೊಳ್ಳುತ್ತದೆ. ಅನ್ಯಾಯದ ವಿರುದ್ಧ ಸಂಘರ್ಷ ಹೋರಾಟಗಳು ಮತ್ತು ಸುಯೋಗ್ಯ ರೀತಿಯಲ್ಲಿ ನಾಯಕತ್ವದ ನಿರ್ವಹಣೆಯಿಂದ ಇವು ಸಾಧ್ಯವಾಗುತ್ತವೆ. ವ್ಯಕ್ತಿಯಲ್ಲಿ ಉತ್ತಮವಾದ ವೈಯಕ್ತಿಕ ಚಾರಿತ್ರ್ಯವನ್ನು, ಸಂಸ್ಕಾರವನ್ನು ರೂಪಿಸಲು ಹಾಗೂ ರಾಷ್ಟ್ರೀಯ ಹೊಣೆಗಾರಿಕೆಯ ಅರಿವನ್ನು ಮೂಡಿಸಿ ಆತನನ್ನು ಕ್ರಿಯಾಶೀಲ ನಾಗರಿಕನನ್ನಾಗಿ ರೂಪಿಸಲು ಅವಶ್ಯಕವಾದಂತಹ ಹಲವಾರು ಗುಣಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ನೆಲೆಯಾಗಿದೆ. ಸಹಕಾರ ಭಾರತಿಯ ರಚನಾತ್ಮಕ ದೃಷ್ಟಿಕೋನದ ಹಿನ್ನಲೆಯಾಗಿದೆ.

* * *

# ಸಹಕಾರ ಭಾರತಿಯ ನಾಲ್ಕು ಪ್ರಮುಖ ಕಾರ್ಯಗಳು

ಯಾವುದೇ ಸಂಘಟನೆಯ ಕರ್ತವ್ಯಗಳಾಗಲಿ ಅಥವಾ ಆದರ್ಶಗಳಾಗಲೀ ಅವು ಎಷ್ಟೇ ಉದಾತ್ತವಾಗಿದ್ದರೂ ಅವುಗಳಿಗೆ ಮಹತ್ವ ಬರುವುದು, ಮಾನ್ಯತೆ ಸಿಗುವುದು ಅವುಗಳು ಕಾರ್ಯಕ್ಷೇತ್ರದಲ್ಲಿ ಅನುಷ್ಠಾನಗೊಂಡಾಗ ಮಾತ್ರ. ಸಹಕಾರ ಭಾರತಿ ತತ್ವಾದರ್ಶಗಳ ಬಗ್ಗೆಯೂ ಇದು ನಿಜ. ಅಂತೆಯೇ ಅದು ತನ್ನ ತತ್ವಾದರ್ಶಗಳನ್ನು ತಾನು ಹಮ್ಮಿಕೊಂಡು ಬಂದಿರುವ ಹಲವಾರು ಕಾರ್ಯಚಟುವಟಿಕೆಗಳ ಮೇಲೆ ಅನುಷ್ಠಾನಗೊಳಿಸುತ್ತಲೇ ಬರುತ್ತಿದೆ. ಸಹಕಾರ ಭಾರತಿಯು ಮುಂದಿನ ದಿನಗಳಲ್ಲಿ ಅಂತಹ ಕಾರ್ಯ ಚಟುವಟಿಕೆಗಳನ್ನು ಈ ಕೆಳಗಿನಂತೆ ಮೂರು ಮುಖ್ಯ ಪ್ರಕಾರಗಳಾಗಿ ವಿಂಗಡಿಸಬಹುದು.

1. **ಸಂಘಟನಾತ್ಮಕ ಕಾರ್ಯಗಳು (Organisational Activities)**
2. **ರಚನಾತ್ಮಕ ಕಾರ್ಯಗಳು (Constructive Activities)**
3. **ಆಂದೋಲನಾತ್ಮಕ ಕಾರ್ಯಗಳು (Agitative Activities)**
4. **ಪ್ರಾತಿನಿಧ್ಯಾತ್ಮಕ ಕಾರ್ಯಗಳು (Representative Activities)**

### 1. ಸಂಘಟನಾತ್ಮಕ ಕಾರ್ಯಗಳು :

ಸಹಕಾರ ಭಾರತಿಯು ತನ್ನ ಧ್ಯೇಯ ಉದ್ದೇಶಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕಾದರೆ, ಬಲಿಷ್ಠ ಸಂಘಟನಾತ್ಮಕ ವ್ಯವಸ್ಥೆ ಹೊಂದುವುದು ಅತ್ಯವಶ್ಯಕ, ತಾಲೂಕು-ಜಿಲ್ಲಾ ಮಟ್ಟದಿಂದ ರಾಜ್ಯ ರಾಷ್ಟ್ರ ಮಟ್ಟದ ವರೆಗೆ ಸುದೃಢ ಸಂಘಟನಾತ್ಮಕ ವ್ಯವಸ್ಥೆ, ಎಲ್ಲಾ ಸ್ತರದಲ್ಲಿಯೂ ಕಾರ್ಯಕರ್ತರ ತಂಡ ನಿರ್ಮಾಣಕ್ಕೆ ವಿಶೇಷ ಕಾರ್ಯಕ್ರಮಗಳನ್ನು ಮಾಡುತ್ತದೆ, ಇದಕ್ಕಾಗಿ ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅಧಿವೇಶನಗಳನ್ನು ಮಾಡುತ್ತದೆ. ಬೇರೆ ಬೇರೆ ಸ್ತರದ ಕಾರ್ಯಕರ್ತರಲ್ಲಿ ಬೌದ್ಧಿಕ ವಿಕಾಸ, ವೈಚಾರಿಕ ಸ್ಪಷ್ಟತೆ ಮತ್ತು ಸಹಕಾರ ಮನೋಭಾವನೆಯ ಬೆಳವಣಿಗೆಗಾಗಿ, ಜಿಲ್ಲಾ, ವಿಭಾಗ ಮತ್ತು ಪ್ರಾಂತ್ಯ ಮಟ್ಟದಲ್ಲಿ ಅಭ್ಯಾಸವರ್ಗ, ಕಾರ್ಯಕರ್ತ ವಿಕಾಸ ಶಿಬಿರಗಳನ್ನು ಮಾಡುತ್ತದೆ.

ಸಂಘಟನಾತ್ಮಕ ಸಂರಚನೆಯಲ್ಲಿ ತಾಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪೂರ್ಣ ಪ್ರಮಾಣದ ಸಮಿತಿ ಇದೆ, ಇವೆಲ್ಲಾ ಸಮಿತಿಗಳು ನಿಯಮಿತವಾಗಿ ಅಂದರೆ ಕನಿಷ್ಠ 2 ತಿಂಗಳಿಗೊಮ್ಮೆ ಸಭೆ ಸೇರಿ ಕಾರ್ಯ ಚಟುವಟಿಕೆಗಳ ಪರಾಮರ್ಶೆ ಮಾಡಿ ಮುಂದಿನ ಕಾರ್ಯಯೋಜನೆಗಳ ರೂಪುರೇಷೆಯನ್ನು ಯೋಜನೆ ಮಾಡುತ್ತದೆ. ಹಾಗೆಯೇ ಸಹಕಾರ ಕ್ಷೇತ್ರದ ಬೇರೆ ಬೇರೆ ವಿಭಾಗಗಳಲ್ಲಿರುವ ಪತ್ತಿನ ಸಹಕಾರ ಸಂಘ, ಕೃಷಿ ಸಹಕಾರ ಸಂಘ, ಹಾಲು ಉತ್ಪಾದಕರ ಸಹಕಾರ ಸಂಘ, ಗೃಹ ನಿರ್ಮಾಣ, ಮಹಿಳಾ ಸಹಕಾರ ಸಂಘ, ಮೀನುಗಾರರ ಸಹಕಾರಿ ಸಂಘ, SC/ST ಲ್ಯಾಂಪ್ಸ್ ಸಂಘ ಸೇರಿದಂತೆ ಆಯಾಯ ವಿಭಾಗಗಳಲ್ಲಿ ಪ್ರತ್ಯೇಕ ಪ್ರಕೋಷ್ಠ (Cell)ಗಳನ್ನು ರಚಿಸಿ ಆಯಾ ವಿಭಾಗಕ್ಕನುಗುಣವಾಗಿ ಕಾರ್ಯಕರ್ತರನ್ನು ಜೋಡಿಸಿ ಸಹಕಾರ ಭಾರತಿಯನ್ನು ಸದೃಢವಾಗಿ ಕಟ್ಟಿ ಬೆಳೆಸುವ ಸಂಘಟನಾತ್ಮಕ ಕಾರ್ಯವನ್ನು ಮಾಡುತ್ತದೆ.

## 2. ರಚನಾತ್ಮಕ ಕಾರ್ಯಗಳು :

'ರಚನಾತ್ಮಕ ಕಾರ್ಯ' ಎಂದರೇನು ಎಂಬುದು ಒಂದು ಜಿಜ್ಞಾಸೆಯ ವಿಷಯ. ರಾಷ್ಟ್ರ ಪುನರ್‌ನಿರ್ಮಾಣದ ಕಾರ್ಯವೇ ರಚನಾತ್ಮಕ ಕಾರ್ಯ ಎಂದು ವಿಶಾಲ ಅರ್ಥದಲ್ಲಿ ಹೇಳಬಹುದಾದರೂ ಈ ಕಾರ್ಯದ ಕುರಿತಾದ ಒಂದು ನಿರ್ದಿಷ್ಟ ಕಲ್ಪನೆ ನಮಗಿರುವುದು ಸೂಕ್ತ. ರಚನಾತ್ಮಕ ಕಾರ್ಯಗಳ ಕುರಿತಾಗಿ ಸಹಕಾರ ಭಾರತಿ ತನ್ನ ಮೂಲಭೂತ ತತ್ವಗಳಲ್ಲಿ ವಿಶೇಷ ಒತ್ತು ನೀಡಲು ಕಾರಣವಿದೆ. ಈಗ ಸಹಕಾರ ಕ್ಷೇತ್ರದಲ್ಲಿ ಕಾಣಬರುವ ವಿಫಲತೆಗೆ, ಕೆಡುಕುಗಳಿಗೆ ನಾವು ಬೇರೆಯಾರನ್ನೂ ನಿಂದಿಸಲಾಗುವುದಿಲ್ಲ. ನಮ್ಮಲ್ಲಿ ಎದ್ದು ಕಾಣುವ ಲೋಪ ದೋಷಗಳನ್ನು ನಾವೇ ಸರಿಪಡಿಸಿಕೊಂಡು, ಪರಿಹಾರ ಕಂಡುಕೊಂಡು ಸುಧಾರಣೆ ಹಾಗೂ ಪ್ರಗತಿಯನ್ನು ಕಾಣಬೇಕಾಗಿದೆ. ಈ ನಮ್ಮ ದೃಷ್ಟಿಕೋನವು ನೇತ್ಯಾತ್ಮಕ (Negative) ಅಲ್ಲ. ನಮ್ಮನ್ನು ನಾವೇ ಪುನರ್‌ನಿರ್ಮಿಸುವೆವು ಎಂಬ 'ಧನಾತ್ಮಕ' (Positive) ದೃಷ್ಟಿಯಾಗಿದೆ. ಆದುದರಿಂದ ಸಹಕಾರ ಭಾರತಿಯು ಒಂದು ಸಹಕಾರಿ ಸಂಘಟನೆಯಾಗಿ ತನ್ನ ಇತಿಮಿತಿಗಳನ್ನು ಅರ್ಥೈಸಿಕೊಂಡು ಕೆಲವೊಂದು ರಚನಾತ್ಮಕ ಕಾರ್ಯಗಳನ್ನು ಸ್ವತಃ ನಡೆಸಿಕೊಂಡು ಬರುತ್ತಿದೆ. ಸಹಕಾರ ಕ್ಷೇತ್ರ ಇಂದು ಅತ್ಯಂತ ವಿಸ್ತಾರವಾಗಿದೆ. ಹುಟ್ಟಿನಿಂದ ಚಟ್ಟದವರೆಗೆ ಎನ್ನಬಹುದಾದ ರೀತಿಯಲ್ಲಿ ಇವತ್ತು ಸಹಕಾರ ಕ್ಷೇತ್ರ ವ್ಯಾಪಿಸಿಕೊಂಡಿದೆ. ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಬ್ಯಾಂಕಿಂಗ್, ಮಾರಾಟ, ಉತ್ಪಾದನೆ, ಸಾರಿಗೆ, ಕೈಗಾರಿಕೆ, ವೈದ್ಯಕೀಯ ಹೀಗೆ ಸಹಕಾರ ಕ್ಷೇತ್ರದ ವಿಸ್ತರಣೆ ವಿಶಾಲವಾಗಿ ಹಬ್ಬಿದೆ.

ಇಂದಿನ ಜಾಗತೀಕರಣ ಮತ್ತು ಖಾಸಗೀಕರಣ ಯುಗದಲ್ಲಿ ನಮ್ಮ ಸಹಕಾರ ಸಂಘಗಳ ಆಡಳಿತದಲ್ಲಿ ವೃತ್ತಿಪರತೆಯನ್ನು, ಸೇವೆಯಲ್ಲಿ ಸ್ಪರ್ಧಾತ್ಮಕತೆಯನ್ನು, ಸಿಬ್ಬಂದಿಗಳಲ್ಲಿ ಕೌಶಲ್ಯ ಮತ್ತು ಪರಿಣತಿಯನ್ನು, ಸದಸ್ಯರಲ್ಲಿ ಸಕ್ರಿಯತೆಯನ್ನು ಮಾಡುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಸಹಕಾರ ಭಾರತಿಯು ಮಾಡುತ್ತದೆ. ಸಹಕಾರ ಕ್ಷೇತ್ರದ ಶಕ್ತಿ, ಕೊರತೆ, ಸವಾಲು ಮತ್ತು ಅವಕಾಶಗಳ ಬಗ್ಗೆ (SWOT Analysis) ಮಾಡಿಕೊಂಡು ಅಗತ್ಯ ತರಬೇತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಸದಸ್ಯರಲ್ಲಿ ಕಾರ್ಯಕ್ಷಮತೆ ಮತ್ತು ವೃತ್ತಿಪರತೆಯನ್ನು ಮೂಡಿಸುವ ನಿಟ್ಟಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ. ಸಹಕಾರಿ ಕಾರ್ಯಕರ್ತರಲ್ಲಿ ವೈಚಾರಿಕತೆ ಮತ್ತು ಬೌದ್ಧಿಕ ವಿಕಾಸಕ್ಕಾಗಿ ಅಧ್ಯಯನ ಕೇಂದ್ರ, ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಹಕಾರ ನೀತಿಯ ಬಗ್ಗೆ ವಿಮರ್ಶಿಸಲು ಆಯಾ ಸ್ತರದಲ್ಲಿ ವಿಚಾರ ಸಂಕಿರಣ–ಗೋಷ್ಠಿಗಳನ್ನು ಆಯೋಜಿಸುತ್ತದೆ. ಪರಸ್ಪರ ಸ್ವಸಹಾಯ ಭಾವನೆಯನ್ನು ಬೆಳೆಸಲು ಸ್ವಚ್ಛಭಾರತ್, ಶ್ರಮದಾನ, ಆರೋಗ್ಯ ಶಿಬಿರಗಳಂತಹ ಕಾರ್ಯಕ್ರಮಗಳನ್ನು ಸಂಘಟಿಸುತ್ತದೆ. ರಾಷ್ಟ್ರೀಯ ಭ್ರಾತೃತ್ವ, ದೇಶಭಕ್ತಿ, ಸಂಸ್ಕಾರ ಮೂಡಿಸುವ ನಿಟ್ಟಿನಲ್ಲಿ ರಾಷ್ಟ್ರ ನಾಯಕರ ಜಯಂತ್ಯೋತ್ಸವಗಳು ಉದಾಹರಣೆಗೆ ಸ್ವಾಮೀ ವಿವೇಕಾನಂದ, ಸುಭಾಷ್ಚಂದ್ರ ಬೋಸ್, ಮಹಾತ್ಮ ಗಾಂಧೀಜಿ, ಡಾ॥ ಅಂಬೇಡ್ಕರ್, ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಸ್ಮರಣೆಯ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಭೂಕಂಪ, ನೆರೆಹಾವಳಿ, ಚಂಡಮಾರುತ, ಪ್ರಾಕೃತಿಕ ಅಪಘಾತಗಳಂತಹ ಸಂದರ್ಭದಲ್ಲಿ ರಾಷ್ಟ್ರೀಯ ಹಿತಾಸಕ್ತಿ ಮತ್ತು

ತನ್ನ ಸಾಮಾಜಿಕ ಜವಾಬ್ದಾರಿಯನ್ನು ಮುಂದಿಟ್ಟುಕೊಂಡು ಸಮಾಜಮುಖಿ ಸೇವಾಕಾರ್ಯಗಳಲ್ಲಿ ಸಹಕಾರ ಭಾರತಿಯು ರಚನಾತ್ಮಕವಾಗಿ ತೊಡಗಿಕೊಳ್ಳುತ್ತದೆ.

### 3. ಆಂದೋಲನಾತ್ಮಕ ಕಾರ್ಯಕ್ರಮಗಳು :

ಸಹಕಾರ ಕ್ಷೇತ್ರವು ರಾಜ್ಯ ಹಾಗೂ ಕೇಂದ್ರ ಸರಕಾರದ ವಿವಿಧ ಸಹಕಾರ ಕಾಯ್ದೆ ಮತ್ತು ನಿಯಮಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತದೆ. ಸಹಕಾರ ಸಂಘಗಳು ನಿರ್ವಹಿಸುವ ವ್ಯವಹಾರಕ್ಕೆ ಅನುಗುಣವಾಗಿ ಕಾರ್ಮಿಕ, ಆದಾಯ ತೆರಿಗೆ ಸೇರಿದಂತೆ ಬೇರೆ ಬೇರೆ ಇಲಾಖೆಗಳಲ್ಲಿ ಕಾನೂನು ಮತ್ತು ನಿಯಮಗಳಲ್ಲಿ ಬದಲಾವಣೆಯಿಂದಾಗಿ ಸಹಕಾರ ಕ್ಷೇತ್ರಕ್ಕೆ ಪ್ರತಿಕೂಲ ಪರಿಣಾಮಗಳಾದಾಗ ಸಹಕಾರಿಗಳಲ್ಲಿ ಜಾಗೃತಿ ಮೂಡಿಸಿ ಸಹಕಾರ ಭಾರತಿಯು ವ್ಯವಸ್ಥಾ ಪರಿವರ್ತನೆಗಾಗಿ ಆಂದೋಲನಗಳನ್ನು ರೂಪಿಸುತ್ತದೆ. ಹಾಗೆಯೇ ಸಾಮಾಜಿಕ, ವ್ಯಾವಹಾರಿಕ ಮತ್ತು ನೈಸರ್ಗಿಕ ಸಂಗತಿಗಳಿಂದ ಸಹಕಾರ ಸಂಘಗಳ ಬೆಳವಣಿಗೆಗಳ ಮೇಲೆ ನೇತ್ಯಾತ್ಮಕ ಪರಿಣಾಮಗಳುಂಟಾದಾಗ ಆಂದೋಲನ ರೂಪದ ಕಾರ್ಯಕ್ರಮಗಳನ್ನು ಜಾಗೃತಿ ರೂಪದಲ್ಲಿ ಆಯೋಜಿಸುತ್ತದೆ. ಆದರೆ ಒಂದು ಜವಾಬ್ದಾರಿಯುತ ಸಂಘಟನೆಯಾಗಿ ಅಗ್ಗದ ಜನಪ್ರಿಯತೆಗಾಗಿ ನ್ಯಾಯೋಚಿತವಲ್ಲದ ಬೇಡಿಕೆಗಳನ್ನು ಮುಂದಿರಿಸಿಕೊಂಡು ಆಂದೋಲನಗಳನ್ನು ಸಹಕಾರ ಭಾರತಿಯು ಮಾಡುವುದಿಲ್ಲ. ಬದಲಾಗಿ ಸಹಕಾರ ಭಾರತಿಯು ಆಂದೋಲನಗಳನ್ನು ರಚನಾತ್ಮಕ ದೃಷ್ಟಿಯನ್ನಿರಿಸಿಕೊಂಡು ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟಿಸುತ್ತದೆ.

### 4. ಪ್ರಾತಿನಿಧ್ಯಾತ್ಮಕ ಕಾರ್ಯಗಳು :

ಒಂದು ಸಹಕಾರಿ ಸಂಘಟನೆಯಾಗಿ ಸಹಕಾರ ಕ್ಷೇತ್ರಕ್ಕೆ ಸಮರ್ಥ ನಾಯಕತ್ವವನ್ನು ನೀಡಬೇಕಾದರೆ ಈ ಕ್ಷೇತ್ರದ ಮೂಲ ಘಟಕಗಳಾದ ಸಹಕಾರ ಸಂಘಗಳ ನಾಯಕತ್ವವನ್ನು ಸಹಕಾರ ಭಾರತಿಯ ಕಾರ್ಯಕರ್ತರು ವಹಿಸಿಕೊಳ್ಳುವುದು ಅವಶ್ಯಕ. ಈ ಹಿನ್ನಲೆಯಲ್ಲಿ ಸಹಕಾರ ಭಾರತಿಯು ಸಹಕಾರ ಸಂಘಗಳ ಚುನಾವಣೆಯಲ್ಲಿ ತನ್ನ ಸದಸ್ಯರನ್ನು ಅಭ್ಯರ್ಥಿಗಳಾಗಿ ಕಣಕ್ಕೆ ಇಳಿಸುತ್ತದೆ ಮತ್ತು ಸಹಕಾರ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತನ್ನ ಅಭ್ಯರ್ಥಿಗಳನ್ನು ಗೆಲ್ಲಿಸಲು ಪ್ರಚಾರ ಅಭಿಯಾನವನ್ನು ಕೈಗೊಳ್ಳುತ್ತದೆ. ಹೀಗೆ ಪ್ರಾಥಮಿಕ ಸಹಕಾರ ಸಂಘಗಳು ಸೇರಿದಂತೆ ಜಿಲ್ಲಾ, ರಾಜ್ಯ ಮಟ್ಟದ ಎಲ್ಲಾ ಸಹಕಾರಿ ಸಂಸ್ಥೆಗಳಲ್ಲಿ ಸಹಕಾರ ಭಾರತಿಯ ಸದಸ್ಯರ ಆಯ್ಕೆಗೆ ಶ್ರಮಿಸಿ ಸಹಕಾರ ಕ್ಷೇತ್ರದ ಎಲ್ಲಾ ರಂಗಗಳಲ್ಲಿ ತನ್ನ ಪ್ರಾತಿನಿಧ್ಯವನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತದೆ.

### ಸಹಕಾರ ಭಾರತಿ ಆಡಳಿತದ ರಾಜ್ಯದ ಪ್ರಮುಖ ಸಹಕಾರಿ ಸಂಸ್ಥೆಗಳು

1. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

2. ಕ್ಯಾಂಪ್ಕೊ (CAMPCO) 3. ಮ್ಯಾಮ್ಕೋಸ್ (MAMCOS) 4.ತುಮ್ಕೋಸ್ (TUMCOS)

5. ಭಾರತಿ ಟೂರಿಸಂ ಡೆವಲಪ್‌ಮೆಂಟ್ ಕೋ_ಆಪರೇಟಿವ್ (BTDC)

6. ಜನತಾ ಬಜಾರ್‌ಗಳು 7. ಹಾಪ್‌ಕಾಮ್ಸ್‌ಗಳು

8. ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಂಡಳ ನಿ., ಬೆಂಗಳೂರು

9. ರ‍್ಯಾಜದ ಮಟ್ಟದ ತೆಂಗಿನ ನಾರಿನ ಸಹಕಾರ ಮಂಡಳಿ (COIR Board)

10. ರಾಜ್ಯದ ಹಲವಾರು ಡಿ.ಸಿ.ಸಿ. ಬ್ಯಾಂಕ್‌ಗಳು

## ಸಹಕಾರ ಭಾರತಿಯ ಹುಟ್ಟು ಮತ್ತು ಬೆಳವಣಿಗೆ

ದೇಶದ ಸಹಕಾರಿರಂಗಕ್ಕೆ ಹೊಸದಿಕ್ಕನ್ನು ನೀಡುವ ಮಹತ್ತರ ಉದ್ದೇಶದಿಂದ **"ಬಿನಾ ಸಂಸ್ಕಾರ್ ನಹೀ ಸಹಕಾರ್... ಬಿನಾ ಸಹಕಾರ್ ನಹಿ ಉದ್ದಾರ್"** ಎನ್ನುವ ಧ್ಯೇಯವಾಕ್ಯದೊಂದಿಗೆ **1978 ಸಪ್ಟಂಬರ್ 15 "ಅನಂತ ಚತುರ್ದಶಿಯ ಶುಭದಿನ"** ದಂದು ಸಹಕಾರ ಭಾರತಿ ಸಹಕಾರಿ ಕ್ಷೇತ್ರದ ಏಕೈಕ ಸರಕಾರೇತರ ರಾಜಕೀಯ ರಹಿತ ಸ್ವಯಂಸೇವಾ ರಾಷ್ಟ್ರೀಯ ಸಂಘಟನೆಯಾಗಿ ಜನ್ಮತಾಳಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾದ ಮಾನನೀಯ ದಿ. ಲಕ್ಷ್ಮಣರಾವ್ ಇನಾಂದಾರ್ ಮಾರ್ಗದರ್ಶನ ಹಾಗೂ ದಿ. ಮಾಧವರಾವ್ ಗೋಡ್ ಬೋಲೆಯವರ ನೇತೃತ್ವದಲ್ಲಿ ಸಹಕಾರಿ ರಂಗದ ಏಕೈಕ ಸ್ವಯಂಸೇವಾ ಸಂಘಟನೆ ಸಹಕಾರ ಭಾರತಿ –**"ಸಂಪರ್ಕ, ಸೇವೆ, ಸಮರ್ಪಣೆ"**—ಮೂರು ಪ್ರಧಾನ ಸೂತ್ರಗಳ ಆಧಾರದಲ್ಲಿ ಮಹಾರಾಷ್ಟ್ರದ ಪೂನಾದಲ್ಲಿ ಆರಂಭವಾಗಿ ಸಹಕಾರ ಚಳವಳಿ ಮೂಲಕ ಸಮಾಜದ ಅರ್ಥವ್ಯವಸ್ಥೆ ಹಾಗೂ ಸಾಮಾಜಿಕ ಸಬಲೀಕರಣವನ್ನು ಬಲಿಷ್ಟಗೊಳಿಸುವ ಸಂಕಲ್ಪದೊಂದಿಗೆ ಕಾರ್ಯನಿರ್ವಹಿಸುತ್ತಾ ಬರುತ್ತಿದೆ.

**1979 ಜನವರಿ 11**ರಲ್ಲಿ ರಾಷ್ಟ್ರಮಟ್ಟದಲ್ಲಿ ನೋಂದಾವಣೆಗೊಂಡ ಸಹಕಾರ ಭಾರತಿ ಸಂಘಟನೆಯು ಈ ದಿನವನ್ನು ಪ್ರತಿ ವರ್ಷ ತನ್ನ **"ಸಂಸ್ಥಾಪನ ದಿನ"**ವನ್ನಾಗಿ ದೇಶಾದ್ಯಂತ ಆಚರಿಸಿಕೊಂಡು ಬರುತ್ತಿದೆ.

ಪ್ರಸ್ತುತ ದೇಶದ ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಸುಮಾರು **650 ಜಿಲ್ಲೆಗಳಲ್ಲಿ** ಸಕ್ರಿಯವಾದ ಜಿಲ್ಲಾ ಸಮಿತಿಗಳ ಜೊತೆಗೆ ಸಂಘಟನಾತ್ಮಕವಾಗಿ ಸಹಕಾರ ಕ್ಷೇತ್ರದ ಬಲವರ್ಧನೆಗಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಾ ಬರುತ್ತಿದೆ.

## ಕರ್ನಾಟಕಕ್ಕೆ ಸಹಕಾರ ಭಾರತಿಯ ಪ್ರವೇಶ

ಕರ್ನಾಟಕಕ್ಕೆ **1989ರಲ್ಲಿ** ಹೆಜ್ಜೆಯಿಟ್ಟ ಸಂಘಟನೆ ಕಳೆದ 35 ವರ್ಷಗಳಲ್ಲಿ ಹಂತಹಂತವಾಗಿ ವಿಸ್ತರಿಸಲ್ಪಟ್ಟು ಪ್ರಸ್ತುತ **ರಾಜ್ಯದ 32 ಜಿಲ್ಲೆ ಮತ್ತು 3 ಮಹಾನಗರಗಳಲ್ಲಿ** ಮತ್ತು ಸುಮಾರು **195 ತಾಲೂಕುಗಳಲ್ಲಿ** ಸಕ್ರಿಯವಾದ ಜಿಲ್ಲೆ, ಮಹಾನಗರ ಮತ್ತು ತಾಲೂಕು ಸಮಿತಿಗಳಮೂಲಕ ವ್ಯವಸ್ಥಿತವಾದ ಸಂಘಟನಾತ್ಮಕ ಚಟುವಟಿಕೆಗಳ ಜೊತೆಗೆ ಸಮಾಜಕ್ಕೆ ಬಹಳಷ್ಟು ಸೇವೆಯನ್ನು ಕೊಡಲು ಸಾಧ್ಯವಾಗಿರುವುದನ್ನು ಗುರುತಿಸಬಹುದು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರಾದ ಮಾನನೀಯ ದಿ|| ನ. ಕೃಷ್ಣಪ್ಪ ನವರ ನಿರ್ದೇಶನದಂತೆ **1989ರಲ್ಲಿ** ಮಹಾರಾಷ್ಟ್ರದ ದೊಂಬಿವಿಲಿಯಲ್ಲಿ ಜರಗಿದ ಅಖಿಲ ಭಾರತ ಸಹಕಾರ ಭಾರತಿಯ ಮಹತ್ತರವಾದ ಸಭೆಯೊಂದರಲ್ಲಿ ಅಂದಿನ ಹಿರಿಯ ಸಹಕಾರಿಗಳಾದ ಮಂಗಳೂರು ಜನತಾ ಬಜಾರು ಮಾಜಿ ಅಧ್ಯಕ್ಷ ಶ್ರೀ ಪುರಂದರ ಭಟ್, ಕ್ಯಾಂಪ್ಕೊದ ನಿರ್ದೇಶಕ ಶ್ರೀ ಟಿ.ವಿ.ಭಟ್ ಹಾಗೂ ಅಂದಿನ ಯುವ ಸಹಕಾರಿ ಶ್ರೀ ಕೋಂಕೋಡಿ ಪದ್ಮನಾಭ – ಇವರು ಕರ್ನಾಟಕದಿಂದ ಪ್ರತಿನಿಧಿಸುವ ಮೂಲಕ ಕರ್ನಾಟಕ ಸಹಕಾರ ಭಾರತಿ ಆರಂಭಕ್ಕೆ ನಾಂದಿ ಹಾಡಿದರು.

ಅಖಿಲ ಭಾರತ ಸಹಕಾರ ಭಾರತಿ ಸ್ಥಾಪನೆಯ ಮಾರ್ಗದರ್ಶಕ ಮಾನನೀಯ ಶ್ರೀ ಲಕ್ಷ್ಮಣರಾವ್ ಇನಾಂದಾರ್ ರವರ ಸಹೋದರ ಸಂಘದ ಪ್ರಚಾರಕ ಮಾನನೀಯ ತಾತ್ಯಾರಾವ್ ಇನಾಂದಾರ್ ರವರು ಸಭೆಯಲ್ಲಿ ಉಪಸ್ಥಿತರಿದ್ದು ಕರ್ನಾಟಕ ಸಹಕಾರ ಭಾರತಿಯ ಆರಂಭಕ್ಕೆ ಶುಭ ನುಡಿದರು.

ಅಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಕ್ಷೇತ್ರ ಬಲವಾಗಿ ಬೇರೂರಿದ್ದು ಹಾಗೂ ಸಂಘಪರಿವಾರದ ಚಟುವಟಿಕೆಗಳು ಈ ಭಾಗದಲ್ಲಿ ವಿಶೇಷವಾಗಿ ಪಸರಿಸಿದ ಕಾರಣಕ್ಕಾಗಿ ಮಂಗಳೂರು ಮುಖ್ಯಕೇಂದ್ರವಾಗಿ ಸಹಕಾರ ಭಾರತಿಯ ರಾಜ್ಯದ ಚಟುವಟಿಕೆಗಳು ಆರಂಭವಾಯಿತು. ಮಹಾರಾಷ್ಟ್ರ ಮತ್ತು ಗುಜರಾತಿನ ನಂತರ ಕರ್ನಾಟಕ ಸಹಕಾರ ಭಾರತಿಯ ಹೆಜ್ಜೆಗುರುತಿಗೆ 3 ನೇ ರಾಜ್ಯವಾಯಿತು.

**1991ರಲ್ಲಿ** ಗುಜರಾತ್ ನ ರಾಜಕೋಟದಲ್ಲಿ ರಾಷ್ಟ್ರೀಯ ಪ್ರಮುಖರ ಸಂಘಟನಾ ಸಭೆಯೊಂದು ಜರಗಿತು. ಈ ಸಭೆಯಲ್ಲಿ ಕರ್ನಾಟಕದಿಂದ ಶ್ರೀ ಕೋಂಕೋಡಿ ಪದ್ಮನಾಭ ಭಟ್, ಶ್ರೀ ಪುರಂದರಭಟ್, ಶ್ರೀ ಟಿ.ವಿ. ಭಟ್, ಶ್ರೀ ರಾಧಾಕೃಷ್ಣ ಕೋಟೆ, ಶ್ರೀ ಪ್ರಮೋದಕುಮಾರ ರೈ, ಶ್ರೀ ಕೃಷ್ಣ ನಾಯ್ಕ ಪಾಲ್ಗೊಂಡು ಸಂಘಟನೆಯ ಬಗ್ಗೆ ವಿಶೇಷ ಮಾಹಿತಿಯನ್ನು ಕಲೆ ಹಾಕಿದರು.

**1990ರ** ದಶಕದ ಆರಂಭದಲ್ಲಿ ದ.ಕ. ಜಿಲ್ಲೆ ಮೂಲಕ ರಾಜ್ಯದಲ್ಲಿ ಸಂಘಟನೆಯತ್ತ ತೊಡಗಿದ ಸಹಕಾರ ಭಾರತಿ ದ.ಕ. ಜಿಲ್ಲಾ ಸಂಚಾಲಕರಾಗಿ ಶ್ರೀ ಕೋಂಕೋಡಿ ಪದ್ಮನಾಭರವರು ಆಯ್ಕೆಯಾದರು.

ಮಂಗಳೂರು ಜನತಾ ಬಜಾರು ಅಂದಿನ ದಿನಗಳಲ್ಲಿ ಪರಿವಾರ ಸಂಘಟನೆ ಕಾರ್ಯಕರ್ತರ ವಿಶೇಷವಾಗಿ ಶ್ರೀ ಕೋಂಕೋಡಿ ಪದ್ಮನಾಭರ ನೇತೃತ್ವದಲ್ಲಿ ಆಧುನೀಕೃತ ದಿನಸಿ ಮಳಿಗೆಯಾಗಿ ರೂಪುಗೊಂಡು ವಿಶೇಷ ಪ್ರಚಾರವನ್ನು ಪಡೆದಿತ್ತು. **90ರ ದಶಕದ** ಮಧ್ಯ ಭಾಗದಲ್ಲಿ ಮಣಿಪಾಲ ಸಮೀಪದ ಪರೀಕದಲ್ಲಿ ರಾಷ್ಟ್ರೀಯ ಮಟ್ಟದ ಸಮಾವೇಶವೊಂದು ಜರಗಿ ರಾಷ್ಟ್ರದಲ್ಲಿ ಸಂಘಟನೆ ಬಲಪಡಿಸುವ ಯೋಜನೆಗಳು ರೂಪುಗೊಂಡಿತು.

ಕರ್ನಾಟಕ ರಾಜ್ಯ ಸಹಕಾರ ಭಾರತಿಯ ಪ್ರಥಮ ಅಧ್ಯಕ್ಷರಾಗಿ ಮಾಜಿ ಶಾಸಕ ಕ್ಯಾಂಪ್ಕೊ ಸಂಸ್ಥೆಯ ಅಧ್ಯಕ್ಷರಾದ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಶ್ರೀ ಉರಿಮಜ್ಲು ರಾಮ ಭಟ್ ರವರು ಕಾರ್ಯನಿರ್ವಹಿಸಿ ಸಹಕಾರ ಭಾರತಿ ಬೆಳವಣಿಗೆಗೆ ನಾಂದಿಹಾಡಿದರು.

ಆ ಬಳಿಕ ಶ್ರೀ ಕೋಂಕೋಡಿಯವರು ರಾಜ್ಯ ಸಂಚಾಲಕರಾಗುವ ಮೂಲಕ ರಾಜ್ಯದಲ್ಲಿ ಸಂಘಟನೆಗೆ ಸಂಚಲನ ಮೂಡಿಸಿದರು. ಜೊತೆಗೆ ಸುಧೀರ್ಘಾವಧಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಸಹಕಾರ ಭಾರತಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

**2006–2010** ರ ಅವಧಿಯಲ್ಲಿ ಶ್ರೀ ರಾಧಾಕೃಷ್ಣ ಕೋಟೆಯವರ ಸಂಪಾದಕತ್ವದಲ್ಲಿ ಕರ್ನಾಟಕ ಸಹಕಾರ ಭಾರತಿಯ **'ಸಹಕಾರ ಕುಸುಮ'** ತ್ರೈಮಾಸಿಕ ಪತ್ರಿಕೆ ಪ್ರಕಟಗೊಂಡಿತ್ತು.

**2013 ಜನವರಿಯಲ್ಲಿ** ಬೆಂಗಳೂರು ನ್ಯಾಷನಲ್ ಕಾಲೇಜು ಮೈದಾನದಲ್ಲಿ ಜರುಗಿದ ಸಹಕಾರ ಭಾರತಿ **4ನೇ ರಾಷ್ಟ್ರೀಯ ಅಧಿವೇಶನದಲ್ಲಿ** ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕರಾದ **ಶ್ರೀ ಮೋಹನಜೀ ಭಾಗವತ್** ರವರು ಭಾಗವಹಿಸಿದ್ದು, ದೇಶದ ಸಹಕಾರ ರಂಗದ ಸುಧಾರಣೆಗಾಗಿ ಮಹತ್ತ್ವದ **ಬೆಂಗಳೂರು ಡಿಕ್ಲೆರೇಶನ್** (ಘೋಷಣೆ) ಮಾಡಲಾಯಿತು.

ಕರ್ನಾಟಕದ ಕೊಪ್ಪಳದ ಶ್ರೀ ರಮೇಶ್ ವೈದ್ಯರವರು ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಕಾಲಘಟ್ಟದಲ್ಲಿ 2017ರಲ್ಲಿ ಸಂಸ್ಥಾಪಕರಾದ **ದಿವಂಗತ ಶ್ರೀ ಲಕ್ಷ್ಮಣ್ ರಾವ್ ಇನಾಂದಾರ್ ರವರ ಜನ್ಮ ಶತಮಾನೋತ್ಸವ ಸಮಾರಂಭ** ನವದೆಹಲಿಯಲ್ಲಿ ಜರುಗಿದಾಗ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಕಾರ್ಯಕ್ರಮಕ್ಕೆ ಆಗಮಿಸಿ, ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುತ್ತಾ ಸಹಕಾರ ಭಾರತೀಯ ಸಂಸ್ಥಾಪಕರಾದ ಶ್ರೀ ಲಕ್ಷ್ಮಣ್ ರಾವ್ ಇನಾಂದಾರ್ ರವರು ಆಗ ಗುಜರಾತಿನ ಸಂಘದ ಪ್ರಚಾರಕರಾಗಿದ್ದು ಬಾಲ ಸ್ವಯಂಸೇವಕನಾಗಿದ್ದ ನನ್ನನ್ನು ಸಂಘದ ಶಾಖೆಗೆ ಕರೆದುಕೊಂಡು ಹೋಗಿ ಸಂಸ್ಕಾರವನ್ನು ನೀಡಿರುವುದನ್ನು ಸ್ಮರಿಸಿ ಭಾವಪೂರ್ಣ ಮಾತುಗಳನ್ನಾಡಿದ್ದರು.

ಸಹಕಾರ ಭಾರತಿ ಸಂಘಟನಾತ್ಮಕವಾಗಿ, ರಚನಾತ್ಮಕವಾಗಿ, ಆಂದೋಲನಾತ್ಮಕವಾಗಿ ಮತ್ತು ಪ್ರಾತಿನಿಧ್ಯಾತ್ಮಕವಾಗಿ 4 ಆಯಾಮಗಳಲ್ಲಿ ಕ್ರಿಯಾಶೀಲವಾಗಿ ದೇಶದ ಸಹಕಾರ ರಂಗದ ಸುಧಾರಣೆ ಮತ್ತು ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಬರುತ್ತಿದೆ.

## ಸಹಕಾರ ಭಾರತಿ ದೇಶದ ಸಹಕಾರಿ ಕ್ಷೇತ್ರದ ಸುಧಾರಣೆಗಾಗಿ ಪ್ರಜಾಸತ್ತಾತ್ಮಕವಾಗಿ ಕೈಗೊಂಡಿರುವ ಯಶಸ್ವಿ ಆಂದೋಲನಾತ್ಮಕ ಕಾರ್ಯಗಳು

1. ನ್ಯಾಯಾಂಗದ ಹೋರಾಟದ ಮೂಲಕ ಸಹಕಾರಿ ಸಂಸ್ಥೆಗಳ ಮೇಲೆ ಹೇರಲಾಗಿದ್ದ 5% ಕಲ್ಯಾಣ ನಿಧಿ ರದ್ಧತಿ : **1959**ರ ಸಹಕಾರಿ ಕಾಯ್ದೆಗೆ ತಿದ್ದುಪಡಿ.
2. ನಷ್ಟದಲ್ಲಿದ್ದ ಹೈನುಗಾರಿಕೆಗೆ ಚೈತನ್ಯ ನೀಡಲು ರೈತರು ಹಾಲು ಸೊಸೈಟಿಗಳಿಗೆ ಪೂರೈಸುವ ಹಾಲಿಗೆ ಪ್ರತಿ ಲೀಟರ್ ಗೆ **₹2**/– ಪ್ರಪ್ರಥಮವಾಗಿ ಸಹಕಾರ ಭಾರತಿಯಿಂದ ಆಗ್ರಹ. ರಾಜ್ಯ ಸರಕಾರದ ಸ್ಪಂದನೆ. ಪ್ರೋತ್ಸಾಹ ಧನ. ಇದೀಗ **₹5**/– ಕ್ಕೆ ಏರಿಕೆಯಾಗಿದೆ.
3. ಸಿಬ್ಬಂದಿ ನೇಮಕಾತಿಯ ನಿಯಮ 17 ರಲ್ಲಿದ್ದ ತೊಡಕಿನ ಅಂಶಗಳ ತಿದ್ದುಪಡಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ. ನಿಯಮಕ್ಕೆ ತಿದ್ದುಪಡಿ ತರಲು ಯಶಸ್ವಿ.
4. ಕೃಷಿಪತ್ತಿನ ಸಹಕಾರಿ ಸಂಘಗಳ ಪುನಶ್ಚೇತನಕ್ಕಾಗಿ ಪ್ರೊ. ವೈದ್ಯನಾಥನ್ ಸಮಿತಿ ವರದಿ ಜಾರಿಗೆ ಒತ್ತಾಯ. ಅಂಶಿಕ ಯಶಸ್ಸು.
5. ಮೂರನೇ ವ್ಯಕ್ತಿ (Third Party Cheque) ಚೆಕ್ ನಗದೀಕರಣಕ್ಕಾಗಿ ಸಹಕಾರ ಸಂಸ್ಥೆಗಳಿಗೆ ಆರ್‌ಬಿಐ ಅನುಮತಿ ಕೋರಿ ಆಗ್ರಹಪೂರ್ವಕ ಮನವಿ ಸಲ್ಲಿಕೆ. **₹50,000/–** ದ ವರಗೆ ಚೆಕ್ ನಗರೀಕರಣಕ್ಕೆ ಅನುಮತಿ.
6. ಸಹಕಾರಿ ಸಂಸ್ಥೆಗಳ ಮೂಲಕ ಇ–ಸ್ಟಾಂಪಿಂಗ್ ವ್ಯವಸ್ಥೆ ಕಲ್ಪಿಸಲು ಸರಕಾರಕ್ಕೆ ಮನವಿ. ಸಂಪೂರ್ಣ ಯಶಸ್ಸು.
7. ಸಹಕಾರಿ ಸಂಘಗಳ ಆದಾಯವನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲು ನಿರಂತರ ಹೋರಾಟ. ಅಂಶಿಕ ಯಶಸ್ಸು.
8. ಕ್ರೆಡಿಟ್ ಸಹಕಾರಿ ಸಂಘಗಳ ಹಲವಾರು ಬೇಡಿಕೆಗಳ ಜಾರಿಗೆ ಆಗ್ರಹಿಸಿ **2015**ರಲ್ಲಿ ಗೋವಾದಲ್ಲಿ ರಾಷ್ಟ್ರೀಯ ಮಟ್ಟದ ಬೃಹತ್ ಪ್ರದರ್ಶನ ಮತ್ತು ಒತ್ತಾಯ.
9. ಸಹಕಾರ ಸಂಘಗಳ ಆದಾಯವನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲು ನಿರಂತರ ಹೋರಾಟ.
10. ನೇರ ತೆರಿಗೆ ಸಂಹಿತೆ **2010**ನ್ನು ವಿರೋಧಿಸಿ ದೇಶಾದ್ಯಂತ ಸಹಕಾರ ಭಾರತಿ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದು, ಹೋರಾಟ ಇಂದಿಗೂ ಮುಂದುವರೆದಿದೆ.
11. ಡಿಪೋಸಿಟ್ ಇನ್ಶೂರೆನ್ಸ್ ಸ್ಕೀಮ್ (DIGC) **₹ 1** ಲಕ್ಷದಿಂದ **₹ 5** ಲಕ್ಷ ಕ್ಕೆ ಹೆಚ್ಚಿಸಲು ಹೋರಾಟ ಯಶಸ್ವಿಯಾಗಿರುತ್ತದೆ.
12. ಕೃಷಿ ಇಲಾಖೆಯ ಜೊತೆಗಿದ್ದ ಸಹಕಾರಿ ಕ್ಷೇತ್ರಕ್ಕೆ ಪ್ರತ್ಯೇಕವಾದ ಸಹಕಾರಿ ಇಲಾಖೆ ರಚನೆಗೆ ಆಗ್ರಹ. **2021** ರಲ್ಲಿ ಕೇಂದ್ರ ಸರಕಾರ ಪ್ರತ್ಯೇಕ ಸಹಕಾರಿ ಸಚಿವಾಲಯವನ್ನು ರಚಿಸಿರುತ್ತದೆ.

13. ದೇಶದಲ್ಲಿ ಸಹಕಾರಿ ವಿಶ್ವವಿದ್ಯಾನಿಲಯ ಸ್ಥಾಪಿಸಲು ದಶಕಗಳಿಂದ ನಿರಂತರ ಆಗ್ರಹಿಸುತ್ತಿದ್ದ ಸಹಕಾರ ಭಾರತಿಯ ಬೇಡಿಕೆಗೆ ತ್ರಿಭುವನ್ ಸಹಕಾರ ವಿಶ್ವವಿದ್ಯಾನಿಲಯ ಸ್ಥಾಪನೆಯ ಮೂಲಕ ಮಹತ್ವದ ಯಶಸ್ಸು ಲಭಿಸಿದೆ.
14. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ **1997 ಜಾರಿಗೆ** ಒತ್ತಾಯ. ದೇಶದಲ್ಲಿ ಪ್ರಪ್ರಥಮ ವಾಗಿ ಕರ್ನಾಟಕ ರಾಜ್ಯದಲ್ಲಿಯಶಸ್ವಿ ಕರ್ನಾಟಕ ಸೌಹಾರ್ದ ಸಹಕಾರಿ ಸಂಸ್ಥೆಗಳ ಉದಯ.
15. ನೂತನ ಸಹಕಾರ ನೀತಿಗೆ ಒತ್ತಾಯ. ಇದೀಗ ದೇಶದ ಸಹಕಾರಿ ಸಚಿವರಾದ ಶ್ರೀ ಅಮಿತ್ ಶಾ ರವರ ನೇತೃತ್ವದಲ್ಲಿ ನೂತನ ಸಹಕಾರ ನೀತಿಯ ರಚನೆಯ ಜೊತೆಗೆ ಸಹಕಾರಿ ಕ್ಷೇತ್ರದಲ್ಲಿ ಕ್ರಾಂತಿಕಾರ ಬದಲಾವಣೆಗಳಿಗೆ ನಾಂದಿಯಾಗಿದೆ.

---

ಸಹಕಾರ ಭಾರತಿ ನಿರಂತರವಾಗಿ ಸಹಕಾರಿ ಕಾಯಿದೆಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಸರಕಾರದ ಜೊತೆಗೆ ನಿರಂತರ ಸಂಪರ್ಕವನ್ನು ಇಟ್ಟುಕೊಂಡು ಕೆಲವೊಮ್ಮೆ ನ್ಯಾಯಾಂಗ ಹೋರಾಟದ ಮೂಲಕವೂ ಕೂಡ ಯಶಸ್ಸನ್ನು ಪಡೆದಿರುತ್ತದೆ.

## ಸಹಕಾರ ಭಾರತಿ ಸಹಕಾರ ಕ್ಷೇತ್ರದ ಬಲವರ್ಧನೆಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಮುಂದೆ ಇಟ್ಟಿರುವ ಪ್ರಮುಖ ಬೇಡಿಕೆಗಳು.

1. ಕರ್ನಾಟಕ ರಾಜ್ಯ ಸಹಕಾರಿ ಕಾಯ್ದೆ – **1959** ಸಮಗ್ರ ಬದಲಾವಣೆಗೆ ಅಗ್ರಹ.
2. ಜಿಲ್ಲಾ ಮಟ್ಟದಲ್ಲಿ ಪ್ರತ್ಯೇಕ ಜಿಲ್ಲಾ ಸಹಕಾರಿ ನ್ಯಾಯಾಲಯಗಳ ಸ್ಥಾಪನೆ.
3. ವಿಧಾನ ಪರಿಷತ್ ಮತ್ತು ರಾಜ್ಯಸಭೆಗಳಲ್ಲಿ ಸಹಕಾರಿ ಕ್ಷೇತ್ರದಿಂದ ಪ್ರಾತಿನಿಧ್ಯ.
4. ಪಠ್ಯಪುಸ್ತಕಗಳಲ್ಲಿ ಸಹಕಾರಿ ಕ್ಷೇತ್ರದ ಇತಿಹಾಸ, ಮಹತ್ವ ಮತ್ತು ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಸಮಗ್ರ ಮಾಹಿತಿ ಅಳವಡಿಕೆಗೆ ಒತ್ತಾಯ.
5. ಯುವಜನರನ್ನು ಮತ್ತು ಮಹಿಳೆಯರನ್ನು ಸಹಕಾರಿ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ರಾಜ್ಯ ಮತ್ತು ಕೇಂದ್ರ ಸರಕಾರದಿಂದ ವಿವಿಧ ಯೋಜನೆಗಳ ಅನುಷ್ಠಾನ.
6. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕುಗಳಿಗೆ ಅನುಮತಿಸಿರುವ **ಸಿಬಿಲ್** ಮತ್ತು ಶೀಘ್ರ ಸಾಲ ವಸೂಲಾತಿಗಾಗಿ **ಸೆಕ್ಯೂರಿಟೈಸೇಷನ್ ಕಾಯ್ದೆ**ಯನ್ನು ಸಹಕಾರಿ ಸಂಸ್ಥೆಗಳಿಗೂ ಅಳವಡಿಕೆ ಮಾಡಿಕೊಳ್ಳಲು ಅವಕಾಶ ನೀಡುವುದು.
7. ಸಹಕಾರಿ ಸಂಘಗಳ ತೆರಿಗೆ ನೀತಿಯಲ್ಲಿ ಸ್ಪಷ್ಟತೆ ತರುವುದು.

ಸಹಕಾರ ಭಾರತಿ ಪ್ರತಿ **3 ವರ್ಷಗಳಿಗೊಮ್ಮೆ** ರಾಜ್ಯ ಸಮಾವೇಶ ಮತ್ತು ರಾಷ್ಟ್ರೀಯ ಸಮಾವೇಶಗಳನ್ನು ಆಯೋಜಿಸಿ, ಸಹಕಾರಿ ಕ್ಷೇತ್ರದ ಆಗುಹೋಗುಗಳ ಬಗ್ಗೆ ಚರ್ಚಿಸಿ, ಹಲವಾರು ನಿರ್ಣಯಗಳನ್ನು ಕೈಗೊಂಡು ಸರಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸಿಕೊಂಡು ಬರುತ್ತಿದೆ.

ಕಳೆದ **46** ವರ್ಷಗಳಲ್ಲಿ ಸಹಕಾರ ಭಾರತಿ ಸಹಕಾರಿ ಕ್ಷೇತ್ರದ ಸುಧಾರಣೆ ಮತ್ತು ಅಭಿವೃದ್ಧಿಯಾಗಿ ನಿರಂತರವಾಗಿ ಕಾರ್ಯ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಗೊಳಿಸುತ್ತಿದ್ದು, ರಾಷ್ಟ್ರೀಯ ಚಿಂತನೆಗಳ ಮೂಲಕ ಸಹಕಾರಿ ಕ್ಷೇತ್ರಕ್ಕೆ ಹೊಸ ಚೈತನ್ಯವನ್ನು ತುಂಬಲು ನಿರಂತರವಾಗಿ ಶ್ರಮಿಸುತ್ತಿದೆ.

# ವಿಶ್ವಮಟ್ಟದಲ್ಲಿ ಸಹಕಾರ ಚಳುವಳಿ ನಡೆದು ಬಂದ ದಾರಿ

ವಿದೇಶದಲ್ಲಿ ಸಹಕಾರ ಚಳುವಳಿಯ ಉಗಮಕ್ಕೆ ಬ್ರಿಟನ್ ದೇಶದ ಗ್ರಾಹಕರ ಸಹಕಾರ ಚಳುವಳಿ ನಾಂದಿ ಹಾಡಿತು. ಬ್ರಿಟನ್ ದೇಶದಲ್ಲಿ ಕೈಗಾರಿಕಾ ಕ್ರಾಂತಿಯ ನಂತರ ಶ್ರೀಮಂತ ಮತ್ತು ಕಾರ್ಮಿಕ ವರ್ಗ ಎಂದು ಎರಡು ಗುಂಪುಗಳಾಗಿ ಕಾರ್ಮಿಕರು ನಿರಂತರ ಶೋಷಣೆಗೆ ಒಳಗಾದಾಗ ಕಾರ್ಮಿಕರಿಗೆ ಯೋಗ್ಯ ಸಂಬಳ, ಉತ್ತಮ ಶಿಕ್ಷಣ, ವಸತಿ ಸೌಲಭ್ಯ ಹಾಗೂ ಇತರೆ ಕಾರ್ಮಿಕ ಕಲ್ಯಾಣ ಯೋಜನೆಯನ್ನು ಕಾರ್ಯಗತ ಮಾಡಲು **'ಸಹಕಾರ ಗ್ರಾಮ'** ಸ್ಥಾಪಿಸಿದ ಕೀರ್ತಿ **'ಶ್ರೀ ರಾಬರ್ಟ್ ಓವನ್'**ಗೆ ಸಲ್ಲುತ್ತದೆ.

ಇದಕ್ಕೆ ಪೂರಕವಾಗಿ **1844**ರಲ್ಲಿ ಇಂಗ್ಲೆಂಡ್ ರಾಕ್‌ಡೇಲ್ ಪಟ್ಟಣದ ಟೋಡ್‌ಲೇನ್ ಬೀದಿಯ ಗಿರಣಿಯೊಂದರಲ್ಲಿ ಕೆಲಸ ಮಾಡುತ್ತಿದ್ದ 28 ಕಾರ್ಮಿಕರು ಆಹಾರ ಪದಾರ್ಥಗಳನ್ನು ಸಗಟಾಗಿ ಖರೀದಿ ಮಾಡಿ ಚಿಲ್ಲರೆಯಾಗಿ ಮಾರಾಟ ಮಾಡಲು ಒಂದು ಗ್ರಾಹಕರ ಸಹಕಾರ ಸಂಘವನ್ನು ಸ್ಥಾಪನೆ ಮಾಡಿದರು. ಅದು ಅದ್ಭುತ ಯಶಸ್ಸನ್ನು ಕಂಡು, ಇಂದಿಗೂ ತನ್ನ ಯಶೋಗಾಥೆಯನ್ನು ಸಾರಿಕೊಂಡು ಕಾರ್ಯನಿರ್ವಹಿಸುತ್ತಿದೆ. ಅಂದು ಈ ವ್ಯವಹಾರಕ್ಕೆ ಹಾಕಿಕೊಂಡ ನೀತಿ ಸಂಹಿತೆಗಳು ಕಾಲಕ್ರಮೇಣ ಸಹಕಾರ ತತ್ವಗಳಾಗಿ ಬದಲಾವಣೆಗೊಂಡವು. ಆದ್ದರಿಂದ ಸಹಕಾರ ಕ್ಷೇತ್ರದ ಇತಿಹಾಸದಲ್ಲಿ ಈ 28 ನೇಕಾರರನ್ನು ರಾಕ್‌ಡೇಲ್ ಅಗ್ರಗಾಮಿಗಳೆಂದು ಕರೆಯಲಾಯಿತು. ಇದಕ್ಕೆ ಪ್ರೇರಣೆ ನೀಡಿದ ಸಮಾಜವಾದಿ ನಾಯಕ ರಾಬರ್ಟ್ ಓವನ್‌ನನ್ನು ಸಹಕಾರ ಕ್ಷೇತ್ರದ ಜನಕ ಎಂದು ಪರಿಗಣಿಸಲಾಯಿತು.

ಇಂಗ್ಲೆಂಡ್‌ನ ಗ್ರಾಹಕ ಸಹಕಾರ ಸಂಘಗಳ ಮಾದರಿಯು ಇತರ ದೇಶಗಳಿಗೆ ಸಹಕಾರ ಚಳವಳಿಯ ಪ್ರಸಾರಕ್ಕೆ ಮಾದರಿಯಾಯಿತು. ಸಹಕಾರವು ಇತರ ಕ್ಷೇತ್ರಗಳಿಗೂ ವಿಸ್ತರಣೆಯಾಯಿತು. ಜರ್ಮನ್ ದೇಶದಲ್ಲಿ **1852**ರಲ್ಲಿ **'ಹರ್ಮನ್ ಶೂಲ್ಸ್'** ಎಂಬ ವ್ಯಕ್ತಿ ವ್ಯಾಪಾರಿಗಳು ಮತ್ತು ಮಧ್ಯಮ ವರ್ಗದ ಆರ್ಥಿಕ ಸುಧಾರಣೆಗೆ ಬ್ರಿಟನ್ ಮಾದರಿಯಲ್ಲಿ ಪತ್ತಿನ ಸಹಕಾರ ಸಂಘವೊಂದನ್ನು ಸ್ಥಾಪನೆ ಮಾಡಿದನು. ನಂತರ ಆರ್ಥಿಕ ಅಭಿವೃದ್ಧಿಗೆ ಕ್ರೆಡಿಟ್ ಯೂನಿಯನ್‌ಗಳು, ಪಟ್ಟಣ ಸಹಕಾರ ಸಂಘಗಳು ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳು ಜರ್ಮನಿ ದೇಶದಲ್ಲಿ ಪ್ರಾರಂಭವಾದವು. ಆ ಬಳಿಕ ಈ ಚಳವಳಿಯು ವಿಶ್ವದ ಬೇರೆ ಬೇರೆ ದೇಶಗಳಿಗೆ ಪಸರಿಸಲು ಪ್ರಾರಂಭವಾಯಿತು.

**1854**ರಲ್ಲಿ ಜರ್ಮನಿಯಲ್ಲಿ **ಫ್ರೆಡ್ರಿಕ್ ವೊನ್ ರೈಫಿಜಿನ್** ಗ್ರಾಮ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಆಧುನಿಕ ಸಹಕಾರ ಜಗತ್ತಿನ ಮೊದಲ ಪತ್ರಿಕೆ **'ದಿ ಕೋ-ಆಪ್‌ರೇಟಿವ್'**ನ್ನು **ಡಾ. ವಿಲಿಯಂ ಕಿಂಗ್** ಪ್ರಾರಂಭಿಸಿದರು.

* * *

# ಭಾರತದಲ್ಲಿ ಸಹಕಾರ ಚಳುವಳಿ

ಭಾರತದಲ್ಲಿ ಸಹಕಾರ ಗುಣವು ಸನಾತನವಾದುದು. ಜನ ಜೀವನ ಚಟುವಟಿಕೆಗಳಲ್ಲಿ ಸಹಜವಾಗಿ ಸಹಕಾರ ಪ್ರವೃತ್ತಿ ಬೆಳೆದು ಅನಂತರದಲ್ಲಿ ಸಾಂವಿಧಾನಿಕ ಮಾನ್ಯತೆ ದೊರಕಿತು. ಈ ಆಧಾರದಲ್ಲಿ ಭಾರತದ ಸಹಕಾರ ಚಳುವಳಿ ನಡೆದು ಬಂದ ದಾರಿಯನ್ನು 5 ವಿಧವಾಗಿ ವಿಂಗಡಿಸಬಹುದು.

1. ಸ್ವಾತಂತ್ರ್ಯಾ ಪೂರ್ವ
2. ಸ್ವಾತಂತ್ರ್ಯಾ ನಂತರ
3. ಹೊಸ ಆರ್ಥಿಕ ನೀತಿ (1991) ಜಾರಿ ನಂತರ
4. ಸೌಹಾರ್ದ ಸಹಕಾರಿ ಯುಗ 1997ರ ನಂತರ
5. ಭಾರತ ಸಂವಿಧಾನದಲ್ಲಿ ಸಹಕಾರಕ್ಕೆ ಸ್ಥಾನ (97ನೇ ಸಂವಿಧಾನ ತಿದ್ದುಪಡಿ ನಂತರ)

1. **ಸ್ವಾತಂತ್ರ್ಯ ಪೂರ್ವ :** ರೈತರ ಆರ್ಥಿಕ ಸಂಕಷ್ಟಗಳ ಪರಿಹಾರಕ್ಕಾಗಿ ಅನೇಕ ಆರ್ಥಿಕ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೂ ರೈತರ ಆರ್ಥಿಕ ಸಂಕಷ್ಟಗಳ ನಿವಾರಣೆಯಾಗದೆ ತೊಂದರೆಗೀಡಾಗಿರುವುದನ್ನು ಬ್ರಿಟೀಷ್ ಸರ್ಕಾರ ಗಮನಿಸಿ ರೈತರನ್ನು ಸಾಲ ಬಾಧೆಯಿಂದ ಮುಕ್ತಿ ನೀಡುವಂತಹ ಯೋಜನೆ ರೂಪಿಸಲು ಫೆಡರಿಕ್ **ನಿಕೋಲ್ಸನ್** ಎಂಬ ಅಧಿಕಾರಿಯನ್ನು ಇಂಗ್ಲೆಂಡ್ ದೇಶಕ್ಕೆ ಕಳುಹಿಸಿ ಅಲ್ಲಿನ ಸಹಕಾರ ಚಳುವಳಿಯ ಅಧ್ಯಯನ ಮಾಡಿ ವರದಿ ತಯಾರಿಸಿತು. ಫ್ರೆಡರಿಕ್ ನಿಕೋಲ್ಸನ್‌ರವರ ವರದಿ ಆಧಾರದ ಮೇಲೆ ಭಾರತದಲ್ಲಿ ಸಹಕಾರ ಚಳುವಳಿಯನ್ನು ಪ್ರಾರಂಭಿಸಲು ಅನುಕೂಲವಾಗುವಂತೆ **1904 ಮಾರ್ಚ್ 25ನೇ ದಿನಾಂಕದಂದು ಅಖಿಲ ಭಾರತ ಸಹಕಾರಿ ಪತ್ತಿನ ಕಾಯ್ದೆಯನ್ನು ಜಾರಿಗೆ ತರಲಾಯಿತು.** ಹೀಗಾಗಿ ಭಾರತದಲ್ಲಿ ಸಹಕಾರ ಚಳುವಳಿ ಅಧಿಕೃತವಾಗಿ ಸಹಕಾರ ಕಾನೂನು ಮುಖಾಂತರ ಪ್ರಾರಂಭವಾಯಿತು. ಭಾರತದಲ್ಲಿ ಪ್ರಥಮವಾಗಿ ಕೃಷಿ ಸಹಕಾರ ಸಂಘವೊಂದನ್ನು ದೇಶದ ಸಹಕಾರಿ ಪಿತಾಮಹ ಎನಿಸಿಕೊಂಡಿರುವ **ಸಿದ್ದನಗೌಡ ಸಣ್ಣರಾಮನಗೌಡ** ಪಾಟೀಲ ನೇತೃತ್ವದಲ್ಲಿ **ಕರ್ನಾಟಕದ ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಕಣಗಿನಹಾಳ ಎಂಬ ಗ್ರಾಮದಲ್ಲಿ 1905 ಮೇ 08 ರಂದು ಪ್ರಾರಂಭವಾಯಿತು.** ನಂತರ ದೇಶದಾದ್ಯಂತ ಅನೇಕ ಕೃಷಿ ಸಹಕಾರ ಸಂಘಗಳ ಸ್ಥಾಪನೆಯಾಯಿತು. ರೈತರಿಗೆ ಕೃಷಿ ಸಾಲ ನೀಡುವ ಸಹಕಾರಿ ಸಂಸ್ಥೆಗಳೂ ಕಾರ್ಯಾಚರಣೆ ಪ್ರಾರಂಭಿಸಿದವು. ಆದರೆ ಈ ಸಹಕಾರ ಸಂಘಗಳಿಗೆ ಅಂದು ಮರು ಹಣಕಾಸು ನೀಡುವ ಕೇಂದ್ರ ಸಂಸ್ಥೆಯನ್ನು ಪ್ರಾರಂಭಿಸಲು ಅವಕಾಶವಿಲ್ಲದೇ ಇದ್ದ ಕಾರಣ ಈ ಸಂಸ್ಥೆಗಳು ಹಣಕಾಸಿನ ಮುಗ್ಗಟ್ಟನ್ನು ಎದುರಿಸಬೇಕಾಯಿತು. **1912**ರಲ್ಲಿ ಸಹಕಾರಿ ಕಾಯ್ದೆಯ ತಿದ್ದುಪಡಿಯನ್ನು ಮಾಡಲಾಗಿ ಕೃಷಿ ಮಾತ್ರವಲ್ಲದೆ ಎಲ್ಲಾ ವಿಧವಾದ ಸಹಕಾರಿ ಸಂಸ್ಥೆಗಳ ಸ್ಥಾಪನೆಗೆ ಅವಕಾಶವಾಗಿ

ಸಹಕಾರ ಕ್ಷೇತ್ರ ಬೆಳೆಯಲಾರಂಭಿಸಿತು. ಸಹಕಾರ ಕ್ಷೇತ್ರದ ತೊಡಕುಗಳ ನಿವಾರಣೆಗೆ **1919**ರಲ್ಲಿ ಎಲ್ಲಾ ಪ್ರಾಂತ್ಯಗಳಲ್ಲಿ ಪ್ರಾಂತೀಯ ಸಹಕಾರ ಕಾಯ್ದೆಗಳ ರಚನೆಯಾಯಿತು. **1935**ರಲ್ಲಿ ದೇಶದ ಆರ್ಥಿಕ ಚಟುವಟಿಕೆಯ ವ್ಯವಹಾರ ಮತ್ತು ನಿಯಂತ್ರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ಸ್ಥಾಪನೆ ಮಾಡಲಾಯಿತು.

2. **ಸ್ವಾತಂತ್ರ್ಯಾನಂತರ : 1947**ರಲ್ಲಿ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದು **1950**ರಲ್ಲಿ ಗಣರಾಜ್ಯದ ಸ್ಥಾಪನೆಯಾಯಿತು. ನೂತನ ಸಂವಿಧಾನದಲ್ಲಿ ಸಹಕಾರ ರಾಜ್ಯಗಳ ವಿಷಯವಾಯಿತು. ಅಂದಿನ ಪ್ರಧಾನಿ ದಿ. ಜವಾಹರಲಾಲ ನೆಹರೂರವರು ಸಹಕಾರ ಚಳುವಳಿಯ ವಿಮರ್ಶೆಗೆ ರಿಸರ್ವ್ ಬ್ಯಾಂಕಿನ ಗವರ್ನರ್ ಶ್ರೀ ಎ.ಡಿ. ಗೊರವಾಲಾ ನೇತೃತ್ವದಲ್ಲಿ **'ಅಖಿಲ ಭಾರತ ಪರಿಶೀಲನಾ ಸಮಿತಿ'**ಯನ್ನು ನೇಮಕ ಮಾಡಿತು. ಸುದೀರ್ಘ ಅಧ್ಯಯನ ನಡೆಸಿದ ಸಮಿತಿಯು, **'ಭಾರತದಲ್ಲಿ ಸಹಕಾರ ಚಳುವಳಿ ಯಶಸ್ವಿಯಾಗಿಲ್ಲ ಆದರೆ ಯಶಸ್ವಿಯಾಗಲೇಬೇಕು'** ಎಂದು ವರದಿಯಲ್ಲಿ ತಿಳಿಸಿ ಸಹಕಾರ ಕ್ಷೇತ್ರವನ್ನು ಬಲಪಡಿಸುವುದಕ್ಕಾಗಿ ಕೆಲವು ಮಹತ್ವದ ಶಿಫಾರಸ್ಸುಗಳನ್ನು ಮಾಡಿತು. ಪ್ರತಿ ಗ್ರಾಮಕ್ಕೊಂದು ಸಹಕಾರ ಸಂಘ, ಸರಕಾರದ ಪಾಲುಗಾರಿಕೆಗೆ ಶಿಫಾರಸ್ಸು, ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿ ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರ್ಣ ಪ್ರಮಾಣದ ನೆರವು, ಹಸಿರು ಕ್ರಾಂತಿಯ ಹರಿಕಾರನಾಗಿ ಸಹಕಾರ ಕ್ಷೇತ್ರ, ಇತ್ಯಾದಿ. ಆದರೂ ಸಹಕಾರ ಕ್ಷೇತ್ರದಿಂದ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಲಾಗಲಿಲ್ಲ.

**1969**ರಲ್ಲಿ ಮತ್ತೆ ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗವರ್ನರ್ ಶ್ರೀ ವೆಂಕಟಪ್ಪಯ್ಯನವರ ನೇತೃತ್ವದ **'ಅಖಿಲ ಭಾರತ ಪ್ರಗತಿ ಪರಿಶೀಲನಾ ಸಮಿತಿ'**ಯು ಇದುವರೆಗಿನ ಕೃಷಿ ನೀಡಿಕೆಯು ರೈತ ಸಮುದಾಯದಲ್ಲಿರುವ ಶೇ.25ರಷ್ಟಿರುವ ದೊಡ್ಡ ರೈತರಿಗೆ ಮಾತ್ರ ತಲುಪಿದೆ. ಶೇ.75ರಷ್ಟಿರುವ ಸಣ್ಣ ಹಾಗೂ ಅತಿ ಸಣ್ಣ ರೈತರು ಕೃಷಿ ಸಾಲ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಹೀಗಾಗಿ ಸಹಕಾರ ಕ್ಷೇತ್ರದ ಮುಖಾಂತರ ಕೃಷಿವಲಯದಲ್ಲಿ ನಿರೀಕ್ಷಿಸಿದ ಪ್ರಗತಿ ಸಾಧನೆಗೆ ಹಿನ್ನಡೆಯಾಗಿದೆ. ಆದುದರಿಂದ ಸಣ್ಣ ರೈತರಿಗೆ ವ್ಯವಸಾಯಕ್ಕೆ ಅಗತ್ಯವಾದ ಸಾಲ ಸೌಲಭ್ಯಗಳನ್ನು ನೀಡುವುದರ ಜೊತೆಗೆ ವ್ಯವಸಾಯಕ್ಕೆ ಪೂರಕವಾದ ಕಸಬುಗಳನ್ನು ಮಾಡಲು ಆರ್ಥಿಕ ನೆರವು ನೀಡಬೇಕಾದುದು ಅವಶ್ಯಕ ಎಂದು ಶಿಫಾರಸನ್ನು ಮಾಡಿತು. ಇದರ ಪರಿಣಾಮವಾಗಿ ಸಣ್ಣ ಹಾಗೂ ಅತಿಸಣ್ಣ ರೈತರ ಹಾಗೂ ಕೃಷಿ ಕಾರ್ಮಿಕರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಇದರ ಪರಿಣಾಮವಾಗಿ **14 ದೊಡ್ಡ ವಾಣಿಜ್ಯ ಬ್ಯಾಂಕುಗಳನ್ನು 1969ರಲ್ಲಿ ರಾಷ್ಟ್ರೀಕರಣ** ಮಾಡಿ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಜೇನು ಸಾಕಾಣಿಕೆ ಮುಂತಾದ ಉಪಕಸುಬುಗಳಿಗೆ ಹೆಚ್ಚಿನ ಆರ್ಥಿಕ ಸಹಾಯ ನೀಡಲು ಆದ್ಯತೆ ನೀಡಲಾಯಿತು. ಹೈನುಗಾರಿಕೆ ಕ್ಷೇತ್ರದ ಅಭಿವೃದ್ಧಿಯಿಂದ ಶ್ವೇತಕ್ರಾಂತಿಯಾಗಿ ರೈತರು ಉಪಕಸುಬುಗಳ ಮೂಲಕ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿ ಕೃಷಿ ಚಟುವಟಿಕೆಗಳನ್ನು ಮಾಡಲು ಅವಕಾಶವಾಯಿತು. ದೇಶದ

ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಕಂಡುಕೊಳ್ಳಲು ಸಾಧ್ಯವಾಯಿತು. ನಂತರದ ದಿನಗಳಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಶಿವರಸನ್ ಕಮಿಟಿ ಸೇರಿದಂತೆ ಬೇರೆ ಬೇರೆ, ಸಮಿತಿಗಳು ಮಾಡಿದ ಶಿಫಾರಸ್ಸುಗಳನ್ನು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಕಾರ್ಯಗತಗೊಳಿಸಿದರು. ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಪಂಚ ವಾರ್ಷಿಕ ಯೋಜನೆಗಳ ಮೂಲಕವೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪ್ರಯತ್ನ ಪಡಲಾಯಿತು.

3. **ಹೊಸ ಆರ್ಥಿಕ ನೀತಿ ಘೋಷಣೆ : 1991ರಲ್ಲಿ** ಉಪ ಹಣಕಾಸು ಸಚಿವರಾಗಿದ್ದ ಡಾ. ಮನಮೋಹನ ಸಿಂಗ್ ರವರು ರಾಷ್ಟ್ರಕ್ಕೆ ಹೊಸ ಆರ್ಥಿಕ ನೀತಿಯನ್ನು ಘೋಷಣೆ ಮಾಡಿದರು. ನಾಗಾಲೋಟದಲ್ಲಿ ಸಾಗುತ್ತಿರುವ ಜಗತ್ತಿನ ಇತರ ರಾಷ್ಟ್ರಗಳ ಜೊತೆಗೆ ಪೈಪೋಟಿ ನೀಡಬೇಕಾದರೆ ಆಹಾರ ಮತ್ತು ಕೈಗಾರಿಕಾ ಉತ್ಪನ್ನಗಳ ಪ್ರಮಾಣ ಹಾಗೂ ಗುಣಮಟ್ಟ ಗಣನೀಯವಾಗಿ ಹೆಚ್ಚಲೇಬೇಕಾಗಿದೆ. ಅಧಿಕ ಪ್ರಮಾಣದಲ್ಲಿ ಬಂಡವಾಳ ತೊಡಗಿಸಬೇಕಾಗುತ್ತದೆ. ಸರಕಾರವೊಂದರಿಂದಲೇ ಈ ಕೆಲಸ ಸಾಧ್ಯವಾಗುವುದಿಲ್ಲ. ಹೀಗಾಗಿ ದೇಶದ ಅಥವಾ ಹೊರದೇಶದ ಖಾಸಗಿ ಉದ್ದಿಮೆದಾರರು. ಉದ್ದಿಮೆಗಳನ್ನು ಪ್ರಾರಂಭಿಸಲು ಮುಕ್ತ ಅವಕಾಶ ಒದಗಿಸಬೇಕು, ಹೀಗಾಗಿ **'ಖಾಸಗೀಕರಣ, ಜಾಗತೀಕರಣ ಹಾಗೂ ಉದಾರೀಕರಣ'** ನೀತಿಯನ್ನು ಘೋಷಿಸಿದರು. ಹೊಸ ಆರ್ಥಿಕ ನೀತಿ ಘೋಷಣೆ ಸಹಕಾರ ಕ್ಷೇತ್ರದ ಅಸ್ಥಿತ್ವಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಬಹುದೆಂದು ಭಾವಿಸಲಾಗಿತ್ತು. ಇನ್ನು ಮುಂದೆ ಸಹಕಾರಿ ಸಂಸ್ಥೆಗಳಿಗೆ ಉಳಿಗಾಲವೇ ಇಲ್ಲವೇನೂ ಎಂಬ ಸಂದೇಹ ಮೂಡಿತ್ತು. ಆದರೆ ಸಹಕಾರಿ ಕ್ಷೇತ್ರದ ಶಿಸ್ತುಬದ್ಧ ಸಂಘಟಿತ ಕಾರ್ಯಾಚರಣೆಯಿಂದ ಸಹಕಾರ ಕ್ಷೇತ್ರ ಪರಿಣಾಮಕಾರಿಯಾಗಿ ಬೆಳೆಯಿತು. ಖಾಸಗೀಕರಣ, ಜಾಗತೀಕರಣ ಮತ್ತು ಉದಾರೀಕರಣದ ಸವಾಲುಗಳನ್ನು ಮೆಟ್ಟಿನಿಂತು ಸಹಕಾರ ರಂಗ ಬೆಳೆದಿರುವುದು ಈ ಕ್ಷೇತ್ರದ ಹೆಚ್ಚುಗಾರಿಕೆಯೂ ಹೌದು ಹಾಗೆಯೇ ಯಶೋಗಾಥೆಯೂ ಹೌದು.

4. **ಸೌಹಾರ್ದ ಸಹಕಾರಿ ಯುಗ :** ದೇಶದ ಅಭಿವೃದ್ಧಿಯನ್ನು ಸಹಕಾರಿ ರಂಗದ ಮೂಲಕ ಸಾಧಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ಕ್ಷೇತ್ರಕ್ಕೆ ವಿವಿಧ ಯೋಜನೆಗಳ ಮೂಲಕ ಕೋಟ್ಯಂತರ ರೂಪಾಯಿ ಹಣವನ್ನು ಶೇರು, ಸಬ್ಸಿಡಿ, ಸಹಾಯ ಧನ ಮುಂತಾದ ರೂಪದಲ್ಲಿ ನೀಡಿತು. **ಗ್ರಾಮಕ್ಕೊಂದು ಪಂಚಾಯಿತಿ, ಗ್ರಾಮಕ್ಕೊಂದು ಶಾಲೆ ಹಾಗೂ ಗ್ರಾಮಕ್ಕೊಂದು ಸಹಕಾರ ಸಂಘ** ಇವುಗಳು ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ತಂಭಗಳು ಎಂದೇ ಕರೆಯಲ್ಪಟ್ಟವು. ಅದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ವಾತಂತ್ರ್ಯಾನಂತರ ಕೋಟ್ಯಾಂತರ ರೂಪಾಯಿ ಹಣವನ್ನು ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ವಿನಿಯೋಗಿಸಿದವು. ಆದರೂ ಸಹಕಾರಿ

ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಿರಲಿಲ್ಲ, ಹಾಗೂ ಸಹಕಾರಿ ರಂಗ ದಾರಿ ತಪ್ಪಿದೆಯೋ ಎಂಬ ಬಗ್ಗೆಯೂ ಚರ್ಚೆಗಳು ಪ್ರಾರಂಭವಾದವು. ಇದನ್ನು ಗಮನಿಸಿದ ಕೇಂದ್ರ ಸರ್ಕಾರ **1987ರಲ್ಲಿ ಶ್ರೀ ಅರ್ಧನಾರೀಶ್ವರನ್ ಇವರ ಅಧ್ಯಕ್ಷತೆಯಲ್ಲಿ** ಈ ಕುರಿತು ಅಧ್ಯಯನ ನಡೆಸಲು ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ತನ್ನ ವರದಿಯಲ್ಲಿ ಸರಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳುವಳಿ ವಿಫಲವಾಗಿದೆಯೆಂದು ಹೇಳಿತು. ಜನಸಾಮಾನ್ಯರು ತಮ್ಮ ಆರ್ಥಿಕ ಏಳಿಗಾಗಿ ತಾವೇ ಸ್ವಯಂ ಸ್ಪೂರ್ತಿಯಿಂದ ಭಾಗವಹಿಸುವ ಈ ಆಂದೋಲನ ಯಶಸ್ವಿಯಾಗುವ ಅಗತ್ಯವಿರುವುದನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗ ಸರ್ಕಾರದ ಹಸ್ತಕ್ಷೇಪ ತಡೆಯಬಲ್ಲ ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಶ್ರೀ ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ **1991ರಲ್ಲಿ** ವಿವಿಧ ರಾಜ್ಯಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಒಂದು ಮಾದರಿ ಕಾಯ್ದೆ ರೂಪಿಸಿತು. ಯೋಜನಾ ಆಯೋಗದಿಂದ ಈ ಮಾದರಿ ಸಹಕಾರಿ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸಿತು. ಈ ಮಾದರಿ ಸಹಕಾರಿ ಕಾಯ್ದೆಯನ್ನು ನಮ್ಮ ರಾಜ್ಯದಲ್ಲಿ ಮೊದಲಾಗಿ ಜಾರಿಗೆ ತರಲಾಯಿತು. ಈ ಕಾಯ್ದೆಯೇ **'ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ 1997'**. ಸುಮಾರು 25 ವರ್ಷಗಳ ಸೌಹಾರ್ದ ಕಾಯ್ದೆಯ ಇತಿಹಾಸ ನಮ್ಮ ಕಣ್ಣಮುಂದೆ ಇದೆ. ಅತ್ಯಲ್ಪ ಅವಧಿಯಲ್ಲಿ ಸುಮಾರು 6000 ದಷ್ಟು ಸೌಹಾರ್ದ ಸಹಕಾರ ಸಂಘಗಳು ಇಂದು ಯಶಸ್ವಿಯಾಗಿ ಒಂದಿಷ್ಟು ಸ್ವಾಯತ್ತ ಸಂಸ್ಥೆಗಳಾಗಿ ಪರಿಣಾಮಕಾರಿಯಾಗಿ ಕಾರ್ಯಾಚರಿಸುತ್ತಿರುವುದನ್ನು ನಾವು ರಾಜ್ಯದೆಲ್ಲೆಡೆ ಕಾಣುತ್ತಿದ್ದೇವೆ.

5. **ಭಾರತ ಸಂವಿಧಾನದಲ್ಲಿ ಸಹಕಾರಕ್ಕೆ ಸ್ಥಾನ :** ಭಾರತ ಸಂವಿಧಾನದಲ್ಲಿ ಸಹಕಾರ ರಾಜ್ಯದ ವಿಷಯ. ಅಂತರಾಷ್ಟ್ರೀಯ ಸಹಕಾರ ವರ್ಷ **2012 ಜನವರಿಯಲ್ಲಿ** ಸಹಕಾರ ಕ್ಷೇತ್ರಕ್ಕೆ ವಿಷಯ ಮನ್ನಣೆ ದೊರೆಯಿತು. ಸಹಕಾರಿ ಸಂಸ್ಥೆ ಸ್ಥಾಪಿಸುವುದು. ಸದಸ್ಯರಾಗುವುದು, ಬೆಳೆಸುವುದು **ಪ್ರಜೆಯ ಸಂವಿಧಾನ ಬದ್ಧವಾದ ಮೂಲಭೂತ ಹಕ್ಕು ಎಂದು 2012 ಜನವರಿಯಲ್ಲಿ ಸಂವಿಧಾನದ 97ನೇ ತಿದ್ದುಪಡಿಯಲ್ಲಿ ಘೋಷಿಸಲಾಯಿತು.** ಸಹಕಾರಿ ಸಂಘಗಳಲ್ಲಿ ಭಾಗವಹಿಸುವುದನ್ನು ಜನರ ಮೂಲಭೂತ ಹಕ್ಕು ಎಂದು ಪರಿಗಣಿಸಿದ ಪರಿಣಾಮ ಸದಸ್ಯರ ಭಾಗೀದಾರಿಕೆ ಹೆಚ್ಚಿತು. ಆಡಳಿತದಲ್ಲಿ ವೃತ್ತಿಪರತೆಯನ್ನು ಜಾರಿಗೆ ತರುವ ಪ್ರಯತ್ನಗಳಾಗಿರುವುದರಿಂದ ಅಭಿವೃದ್ಧಿಯ ಸೂಚ್ಯಂಕ ದರದಲ್ಲಿ ಕೂಡಾ ವೇಗವನ್ನು ಇಂದು ಗುರುತಿಸಬಹುದಾಗಿದೆ.

* * *

# ಸಹಕಾರ ಕ್ಷೇತ್ರದ ಮಹತ್ವ

ಸಹಕಾರ ಎಂದರೆ ಸಾಮಾನ್ಯ ಅರ್ಥದಲ್ಲಿ ಒಂದು ಕೆಲಸದಲ್ಲಿ ಒಬ್ಬರಿಗೆ ಇನ್ನೊಬ್ಬರು ನೆರವು ನೀಡುವುದು, ಕೂಡಿ ಕೆಲಸ ಮಾಡುವುದು, ಸಹಕಾರ ಶಬ್ದಕ್ಕೆ ಹೊಸ ಅರ್ಥ ವಿವರಣೆ ಅಗತ್ಯವಿಲ್ಲ. ಮಾನವ ಹುಟ್ಟಿನಿಂದಲೇ ಸಹಕಾರ ಮನೋಭಾವವನ್ನು ಮೈಗೂಡಿಸಿಕೊಂಡಿದ್ದಾನೆ. ಇಲ್ಲದಿದ್ದರೆ ಬದುಕುವುದೇ ಕಷ್ಟ. ಹೀಗಾಗಿ ಮಾನವನ ದಿನನಿತ್ಯದ ಪ್ರತಿಯೊಂದು ಕಾರ್ಯಗಳಲ್ಲಿ ಇನ್ನೊಬ್ಬರ ಸಹಕಾರವಿದ್ದೇ ಇರುತ್ತದೆ. ಆದ್ದರಿಂದಲೇ ಮಾನವ ಸಂಘಜೀವಿ ಎಂದು ಹೇಳಲಾಗುತ್ತದೆ. ಭಾರತದ ಅವಿಭಕ್ತ ಕುಟುಂಬಗಳು ಸಹಕಾರ ತತ್ವವನ್ನು ಸರಿಯಾಗಿ ಪ್ರತಿಬಿಂಬಿಸಿವೆ. ಹತ್ತರಿಂದ ಹಿಡಿದು ನೂರೈವತ್ತು ಜನ ಒಂದು ಕುಟುಂಬ ಸದಸ್ಯರಾಗಿ ಒಂದೇ ಸೂರಿನಡಿ ಪರಸ್ಪರ ಸಹಕಾರದಿಂದ ಕೂಡಿ ಬಾಳಿ ಜಗತ್ತಿಗೆ ನೀಡಿದ ಸಹಕಾರ ತತ್ವದ ಸಂದೇಶ ಅತ್ಯದ್ಭುತವಾದುದು.

ಸಹಕಾರಿ ಸಂಘ ಎಂದರೆ ಕೆಲವು ಸಮಾನ ಮನಸ್ಕರು, ಸಮಾನತೆಯ ತಳಹದಿಯ ಮೇಲೆ ಒಂದು ಸಾಮಾನ್ಯ ಚಟುವಟಿಕೆಯ ಕಾರ್ಯ ಸಾಧನೆಗಾಗಿ ಒಂದುಗೂಡುವುದು, ಅನಂತರ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಾನುಸಾರ ಸಂಘ ಸ್ಥಾಪಿಸಿ ಕಾರ್ಯನಿರ್ವಹಿಸುವುದು. ಇದು ಒಂದು ಸಹಕಾರಿ ಸಂಘದ ಸಂಘಟನೆಯ ರೂಪವಾಗಿದೆ.

**'ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ'** ಎಂಬುದು ಸಹಕಾರದ ಮೂಲತತ್ವ, ಕಾಲಕ್ರಮದಲ್ಲಿ ಅಂದರೆ 1995ರಲ್ಲಿ ಸಹಕಾರ ರಂಗದ ಅಧ್ಯಯನ ಮಾಡಿದ ಅಂತರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ (International Co-operative alliance) ಏಳು ಸಹಕಾರಿ ತತ್ವಗಳನ್ನು ರಚಿಸಿತು. ಅವುಗಳೆಂದರೆ

**1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ,**

**2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ,**

**3. ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು,**

**4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ.**

**5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ,**

**6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ,**

**7. ಸಾಮಾಜಿಕ ಕಳಕಳಿ.**

ವಿಶ್ವದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಹಕಾರ ಸಂಘಗಳ ಕಾರ್ಯಾಚರಣೆಗೆ, ಯಶಸ್ಸಿಗೆ, ಪ್ರಗತಿಗೆ ಈ ತತ್ವಗಳೇ ಅಡಿಪಾಯ. ಎಲ್ಲವೂ ಈ ಕ್ಷೇತ್ರದ ಪರಿಣಾಮಕಾರಿತ್ವಕ್ಕೆ ಒಂದಕ್ಕೊಂದು ಪ್ರಭಾವಶಾಲಿ ಹಾಗೂ ಮಹತ್ವವನ್ನು ಪಡೆದಿದೆ. ಈ ತತ್ವಗಳನ್ನು ಗಮನಿಸಿದಾಗ ಸಹಕಾರ ಕ್ಷೇತ್ರವು ಸಮಾಜವಾದ ಮತ್ತು ಬಂಡವಾಳವಾದದ ನಡುವಿನ ಸುವರ್ಣ ಮಾಧ್ಯಮದ ರೀತಿಯಲ್ಲಿ ಪ್ರತಿಬಿಂಬಿತ ವಾಗಿರುವುದು ಕಂಡುಬರುತ್ತದೆ.

ಸಹಕಾರ ಕ್ಷೇತ್ರ ಬೇರೆ ಎಲ್ಲಾ ಕ್ಷೇತ್ರಕ್ಕಿಂತ ಭಿನ್ನವಾದ ಒಂದು ಸಾಮಾಜಿಕ ಬದ್ಧತೆಯುಳ್ಳ ವ್ಯವಹಾರಿಕ ಕ್ಷೇತ್ರ. ಈ ಕ್ಷೇತ್ರವು ಸದಸ್ಯ ಕೇಂದ್ರಿತ ಮತ್ತು ಹತೋಟಿ ಇರುವ ವ್ಯವಸ್ಥೆಯಾಗಿದ್ದು ಹಕ್ಕು. ಕರ್ತವ್ಯ ಮತ್ತು ಲಾಭದಲ್ಲಿ ಎಲ್ಲಾ ಸದಸ್ಯರು ಸರ್ವಸಮಾನರು. ಇಲ್ಲಿ ಪ್ರಜಾಸತ್ತಾತ್ಮಕ ರೀತಿಯ ಚುನಾವಣಾ ಪದ್ಧತಿ ಇದೆ. ಸದಸ್ಯರಿಂದ ಆಯ್ಕೆಯಾದ ಪದಾಧಿಕಾರಿಗಳಿಂದ ಕೂಡಿದ ಆಡಳಿತ ಮಂಡಳಿ ಇರುತ್ತದೆ. ಸಹಕಾರ ಸಂಘದ ನೀತಿ ನಿರೂಪಕ ವ್ಯವಸ್ಥೆಯಾಗಿ ಆಡಳಿತ ಮಂಡಳಿಯು ಸಂಘದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಚುನಾವಣೆ, ಅಧಿಕಾರ, ಪದಾಧಿಕಾರ ಇವೆಲ್ಲವೂ ಇರುವುದರಿಂದ ಈ ಕ್ಷೇತ್ರ ಒಂದು ರೀತಿಯಲ್ಲಿ ಪ್ರಾತಿನಿಧ್ಯಾತ್ಮಕ ಕ್ಷೇತ್ರದಂತೆ ಕಾಣುತ್ತದೆ. ಈ ಕ್ಷೇತ್ರದಲ್ಲಿ ವ್ಯಾಪಾರಕ್ಕೆ ಮೂಲ ಸದಸ್ಯರ ಶೇರು ಬಂಡವಾಳ. ಆದುದರಿಂದ ಖಾಸಗಿ ಉದ್ದಿಮೆಗಳ ರೀತಿಯಲ್ಲಿ ಈ ಕ್ಷೇತ್ರವೂ ಬಂಡವಾಳಶಾಹಿ ಕ್ಷೇತ್ರವೆಂದು ಅನೇಕ ಆರ್ಥಿಕ ತಜ್ಞರು ಕರೆದಿದ್ದಾರೆ. ಆದರೆ ಇದನ್ನು ಒಪ್ಪಲು ಸಾಧ್ಯವಿಲ್ಲ ಈ ಕ್ಷೇತ್ರ ಇವೆಲ್ಲಕ್ಕಿಂತ ಹೆಚ್ಚಾಗಿ ಅಂತರ್ಗತವಾಗಿ ಸೇವಾ ಕ್ಷೇತ್ರ. ಇಲ್ಲಿ ಆಡಳಿತ ಮಂಡಳಿಯು ಯಾವುದೇ ಆರ್ಥಿಕ ಫಲಾಪೇಕ್ಷೆ ಇಲ್ಲದೆ ಸಂಘದ ಬೆಳವಣಿಗೆ ಮತ್ತು ಸದಸ್ಯರ ಕಲ್ಯಾಣಕ್ಕಾಗಿ ಸಾಮಾಜಿಕ ಬದ್ಧತೆಯೊಂದಿಗೆ ಕೆಲಸ ಮಾಡುತ್ತದೆ. ಇದಕ್ಕಾಗಿ ಯಾವುದೇ ಪ್ರತಿಫಲವನ್ನು ಪಡೆಯದೆ ಕಾರ್ಯನಿರ್ವಹಿಸುವ ಆಡಳಿತ ಮಂಡಳಿಯ ಪಾತ್ರವು ಸಂಪೂರ್ಣ ಸೇವಾ ರೂಪದಲ್ಲಿರುತ್ತದೆ. ಆದುದರಿಂದ ಈ ಕ್ಷೇತ್ರವು ಪ್ರತಿನಿಧ್ಯಾತ್ಮಕವೂ ಅಲ್ಲ ಬಂಡವಾಳಶಾಹಿ ಕ್ಷೇತ್ರವೂ ಅಲ್ಲ ಸಂಪೂರ್ಣ ಸೇವಾ ಕ್ಷೇತ್ರವಾಗಿದೆ ಎಂಬುವುದು ಸಹಕಾರ ಕ್ಷೇತ್ರದ ಮಹತ್ವವನ್ನು ಹೆಚ್ಚಿಸಿದೆ.

## ಜೈ ಸಹಕಾರ್

# ಹೊಸ ರಾಷ್ಟ್ರೀಯ ಸಹಕಾರ ನೀತಿ (NCP) 2025

**ವಿಕಸಿತ ಭಾರತ್ ಮಾರ್ಗಸೂಚಿ**

- ಹೊಸ NCP 2025, ಸಹಕಾರಿ ವಲಯವನ್ನು ದೇಶದ ಅಭಿವೃದ್ಧಿಯ "ಇಂಜಿನ್" ಆಗಿ ಪರಿವರ್ತಿಸುವ ಗುರಿಯನ್ನು ಹೊಂದಿದೆ
- ಇದರ "**ವಿಕಸಿತ ಭಾರತ್**" ಮಾರ್ಗಸೂಚಿಗಳು ಸಹಕಾರಿ ವಲಯದ ಮೂಲಕ ದೇಶದ ಸರ್ವತೋಮುಖ ಬೆಳವಣಿಗೆಗೆ ಆದ್ಯತೆ ನೀಡುತ್ತವೆ
- ಈ ನೀತಿಯು **ಆರು ಸ್ತಂಭ**ಗಳ ಮೇಲೆ ಆಧಾರಿತವಾಗಿದ್ದು, ಇದು ಜಿಡಿಪಿ ಹೆಚ್ಚಳ ಮಾತ್ರವಲ್ಲದೆ, ವೈಯಕ್ತಿಕ ಸದಸ್ಯರಿಗೆ ಘನತೆ ಮತ್ತು ಸ್ವಾಭಿಮಾನವನ್ನು ಒದಗಿಸುವ ಗುರಿಯನ್ನು ಹೊಂದಿದೆ.
- ಪ್ರವಾಸೋದ್ಯಮ, ಟ್ಯಾಕ್ಸಿ ಸೇವೆಗಳು, ವಿಮೆ ಮತ್ತು ಹಸಿರು ಇಂಧನದಂತಹ ಕ್ಷೇತ್ರಗಳಲ್ಲಿ ಸಹಕಾರ ಸಚಿವಾಲಯವು ವಿವರವಾದ ಯೋಜನೆಗಳನ್ನು ರೂಪಿಸಿದೆ.

## PACSಗಳು CSCಗಳಾಗಿ ಆಡಳಿತವನ್ನು ಕೊನೆಯ ಮೈಲಿಯವರೆಗೂ ತಲುಪಿಸುವುದು

- 3 ಸೇವಾ ವಿತರಣೆಗಾಗಿ ತಿಳಿವಳಿಕೆ ಒಪ್ಪಂದ:
- ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯ ಮತ್ತು ನಬಾರ್ಡ್ ನೊಂದಿಗಿನ ಒಪ್ಪಂದದ ಮೂಲಕ ಹತ್ತಾರು ಸಾವಿರ PACSಗಳನ್ನು CSCಗಳಾಗಿ ಕಾರ್ಯನಿರ್ವಹಿಸಲು ಸಕ್ರಿಯಗೊಳಿಸಲಾಗುತ್ತಿದೆ.
- ನಾಗರಿಕ–ಕೇಂದ್ರಿತ ಸೇವೆಗಳು (Civil Centric Services):
- ಈ ವ್ಯವಸ್ಥೆಯು 300ಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ಇ–ಸೇವೆಗಳನ್ನು ಅತ್ಯಂತ ವಿಶ್ವಾಸಾರ್ಹ ಸ್ಥಳೀಯ ಸಂಸ್ಥೆಯಾದ PACS ಮೂಲಕ ನೇರವಾಗಿ ಗ್ರಾಮೀಣ ನಾಗರಿಕರನ್ನು ತೊಡಗಿಸಿಕೊಂಡು ಪೂರೈಕೆ ಸರಪಳಿಯಲ್ಲಿ ನೇರವಾಗಿ ಭಾಗವಹಿಸುವುದು.

## ಆರ್ಥಿಕ ಸೇರ್ಪಡೆ

- ಆಧಾರ್ ಸಂಪರ್ಕಿತ ಸೌಲಭ್ಯಗಳು, ವಿಮಾ ಯೋಜನೆಗಳು, ಮನೆ ಬಾಗಿಲಿಗೆ ಬ್ಯಾಂಕಿಂಗ್ ಗಾಗಿ ಮೈಕ್ರೋ–ಎಟಿಎಂ ಸೇವೆಗಳು.
- **ಯೋಜನೆಗಳ ಸೇವೆ :** ಕಲ್ಯಾಣ ಯೋಜನೆಗಳ ನೋಂದಣಿ, ಅಗತ್ಯ ಪ್ರಮಾಣಪತ್ರಗಳ ವಿತರಣೆ (ಜಾತಿ ಮತ್ತು ಆದಾಯ).
- **ಯುಟಿಲಿಟಿ ಮತ್ತು ವಾಣಿಜ್ಯ :** ಯುಟಿಲಿಟಿ ಬಿಲ್ ಪಾವತಿಗಳು, ಟಿಕೆಟ್, ಇ_ಟಿಕೆಟ್ ಬುಕಿಂಗ್ ಮತ್ತು ಸ್ಥಳೀಯ ಉತ್ಪಾದಕರನ್ನು ಡಿಜಿಟಲ್ ವಾಣಿಜ್ಯ ವೇದಿಕೆಗಳಿಗೆ ಸಂಪರ್ಕಿಸುವುದು.

* * *

## ರಾಷ್ಟ್ರೀಯ ಸಹಕಾರಿ ಡೇಟಾಬೇಸ್ (NCD)

**ಸೆಂಟ್ರಲ್ ರೆಪೊಸಿಟರಿ :**

**NCD**ಯು ಡಿಜಿಟಲ್ ಬೆನ್ನೆಲುಬಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ (ಕ್ರೆಡಿಟ್, ಡೈರಿ, ಮೀನುಗಾರಿಕೆ, ಇತ್ಯಾದಿ) 8 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಘಗಳನ್ನು ಮ್ಯಾಪ್ ಮಾಡಿದೆ. ಇದು ಇಡೀ ಸಹಕಾರಿ ವ್ಯವಸ್ಥೆಯ ಏಕೈಕ ದತ್ತಾಂಶ ಮೂಲವಾಗಲಿದೆ.

**ನೀತಿ ಮತ್ತು ಯೋಜನೆ:**

- ಸಮಗ್ರ, ಸೂಕ್ಷ್ಮ ದತ್ತಾಂಶವನ್ನು ಒದಗಿಸುವ ಮೂಲಕ, **NCD**ಯು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ದತ್ತಾಂಶ ಆಧಾರಿತ ನಿರ್ಧಾರ ತೆಗೆದುಕೊಳ್ಳಲು ಅನುಕೂಲ ಮಾಡಿಕೊಡುತ್ತದೆ.
- ಸಹಕಾರಿ ಉಪಸ್ಥಿತಿ ದುರ್ಬಲವಾಗಿರುವ ಅಥವಾ ಅಸ್ತಿತ್ವದಲ್ಲಿಲ್ಲದ ಭೌಗೋಳಿಕ ಪ್ರದೇಶಗಳನ್ನು ಗುರುತಿಸುವುದು.
- ಹೊಸ **PACS** ಸ್ಥಾಪನೆಗೆ ಹಿಂದುಳಿದ ಪ್ರದೇಶಗಳಿಗೆ ಆದ್ಯತೆ ನೀಡುವುದು.
- ಸಮುದಾಯಗಳ ನೈಜ ಕಾರ್ಯಕ್ಷಮತೆ ಮತ್ತು ಆರೋಗ್ಯದ ಆಧಾರದ ಮೇಲೆ ನೀತಿ ಸುಧಾರಣೆಗಳನ್ನು ವಿನ್ಯಾಸಗೊಳಿಸುವುದು.

## ಆರು ಮಿಷನ್ ಸ್ತಂಭಗಳು

1. **ಬುನಾದಿಯನ್ನು ಬಲಪಡಿಸುವುದು;**
   ಸಹಕಾರಿಗಳ ಆಡಳಿತವನ್ನು ಸುಧಾರಿಸಲು ಮತ್ತು ಹಣಕಾಸಿನ ಶಿಸ್ತನ್ನು ಹೆಚ್ಚಿಸಲು ಕಾನೂನು ಸುಧಾರಣೆಗಳನ್ನು ಮಾಡಲಾಗುತ್ತದೆ.
2. **ಸಮೃದ್ಧಿಯನ್ನು ಉತ್ತೇಜಿಸುವುದು:**
   ವ್ಯಾಪಾರ, ಪರಿಸರ ವ್ಯವಸ್ಥೆಗಳನ್ನು ಬಲಪಡಿಸುವುದು, ರಫ್ತು ವಿಸ್ತರಿಸುವುದು ಮತ್ತು ಗ್ರಾಮೀಣ ಸಮುದಾಯಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ.
3. **ಭವಿಷ್ಯಕ್ಕೆ ಸಹಕಾರಿಗಳನ್ನು ಸಿದ್ಧಪಡಿಸುವುದು:**
   ಕೃತಕ ಬುದ್ಧಿ ಮತ್ತೆ (AI), ಐಓಟಿ ಮತ್ತು ಬ್ಲಾಕ್‌ಚೈನ್‌ನಂತಹ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಹಕಾರಿಗಳನ್ನು ಭವಿಷ್ಯಕ್ಕೆ ಸಿದ್ಧಪಡಿಸುತ್ತದೆ.
4. **ವ್ಯಾಪಕತೆ ಮತ್ತು ಆಳವಾದ ವ್ಯಾಪ್ತಿ:**
   ಮಹಿಳೆಯರು, ಯುವಕರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಮೇಲೆ ವಿಶೇಷ ಗಮನವನ್ನು ಕೇಂದ್ರೀಕರಿಸುತ್ತದೆ.
5. **ಹೊಸ ಮತ್ತು ಉದಯೋನ್ಮುಖ ಕ್ಷೇತ್ರಗಳನ್ನು ಪ್ರವೇಶಿಸುವುದು;**
   ನವೀಕರಿಸಬಹುದಾದ ಇಂಧನ, ತ್ಯಾಜ್ಯ ನಿರ್ವಹಣೆ, ಆರೋಗ್ಯ ಮತ್ತು ಪ್ರವಾಸೋದ್ಯಮದಂತಹ ಹೊಸ ಕ್ಷೇತ್ರಗಳಲ್ಲಿ ಸಹಕಾರಿಯನ್ನು ವಿಸ್ತರಿಸಲಾಗುತ್ತದೆ.
6. **ಸಹಕಾರಿ ಬೆಳವಣಿಗೆಗಾಗಿ ಯುವ ಪೀಳಿಗೆಯನ್ನು ರೂಪಿಸುವುದು:**
   ಶಿಕ್ಷಣ, ತರಬೇತಿ ಮತ್ತು ಉದ್ಯೋಗದ ಮೂಲಕ ಯುವಜನರನ್ನು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ.

## ಕಾನೂನು, ಆಡಳಿತ ಕಣ – ಪಾರದರ್ಶಕತೆಗೆ ಒತ್ತು

- ಬಹು–ರಾಜ್ಯ ಸಹಕಾರ ಸಂಘಗಳ **(MSCS)** ಕಾಯ್ದೆಗೆ ತಿದ್ದುಪಡಿ.
- ಸಹಕಾರಿ ಚುನಾವಣಾ ಪ್ರಾಧಿಕಾರಕ್ಕೆ ಚಾಲನೆ.
- ಸಹಕಾರಿ ಒಂಬುಡ್ಸ್ ಮನ್ ಸ್ಥಾಪನೆ.
- **MSCS**ಗಳಿಗೆ ಸಮವರ್ತಿ ಲೆಕ್ಕಪರಿಶೋಧನೆಗೆ ಅವಕಾಶ.
- ಡಿಜಿಟಲ್ ಆಡಳಿತಕ್ಕೆ ಒತ್ತು, ಉತ್ತೇಜನ.
- ಸ್ವಜನಪಕ್ಷಪಾತದ ನಿಗ್ರಹಣೆಗೆ ಆದ್ಯತೆ ನೀಡುವುದು.

## ತಳಮಟ್ಟದ ಪರಿವರ್ತನೆ : ಮಾದರಿ PACS : ಬಹು–ಸೇವಾ ಕ್ರಾಂತಿ

- PACSಗಳನ್ನು **'ಸಾಲ–ಮಾತ್ರ'** ಸೊಸೈಟಿಯಿಂದ **ಬಹು–ಸೇವಾ ಕೇಂದ್ರ (MSC)** ಅಥವಾ **ವಿವಿಧೋದ್ದೇಶ (MPCS) ಆಗಿ ಪರಿವರ್ತಿಸುವುದು.**
- ಬಡ್ಡಿಯೇತರ ಆದಾಯ ಮೂಲಗಳ ಅನುಸರಣೆಗೆ ಪ್ರೋತ್ಸಾಹ.
- ಕಸ್ಟಮ್ ಹೈರಿಂಗ್ ಕೇಂದ್ರಗಳನ್ನು ಸ್ಥಾಪಿಸುವುದು (ದುಬಾರಿ ಕೃಷಿ ಯಂತ್ರೋಪಕರಣಗಳು / ಟ್ರ್ಯಾಕ್ಟರ್ ಗಳನ್ನು ಬಾಡಿಗೆಗೆ ಒದಗಿಸುವುದು).
- LPG/CNG/ಪೆಟ್ರೋಲ್/ಡೀಸೆಲ್ ಮಳಿಗೆಗಳಿಗೆ ವಿತರಕರಾಗುವ ಅವಕಾಶ.
- ಗ್ರಾಮೀಣ ಜನರಿಗೆ ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ, ಜೆನೆರಿಕ್ ಔಷಧಿಗಳನ್ನು ಒದಗಿಸಲು ಜನೌಷಧಿ ಕೇಂದ್ರಗಳನ್ನು ತೆರೆಯುವುದು.
- ಬ್ಯಾಂಕಿಂಗ್ ಸಂಸ್ಥೆಗಳಿಗೆ ಬ್ಯಾಂಕ್ ಮಿತ್ರರು / ವ್ಯವಹಾರ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುವುದು.
- 300+ ಇ–ಸೇವೆಗಳನ್ನು (ಉದಾ., ಆಧಾರ್, ಯುಟಿಲಿಟಿ ಪಾವತಿಗಳು) ನೀಡಲು ಸಾಮಾನ್ಯ ಸೇವಾ ಕೇಂದ್ರಗಳಾಗಿ (CSCಗಳು) ಕಾರ್ಯನಿರ್ವಹಿಸುವುದು.
- ಕೃಷಿ ಉತ್ಪನ್ನಗಳ ಸಂಗ್ರಹಣೆ, ಶ್ರೇಣೀಕರಣ, ಪ್ಯಾಕೇಜಿಂಗ್ ಮತ್ತು ಬ್ರಾಂಡಿಂಗ್ ನಲ್ಲಿ ತೊಡಗಿಸಿಕೊಂಡು ಪೂರೈಕೆ ಸರಪಳಿಯಲ್ಲಿ ನೇರವಾಗಿ ಭಾಗವಹಿಸುವುದು

## APEX INSTITUTION ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ(TSU)

- TSU ಸ್ಥಾಪನೆ ಸಹಕಾರಿ ಚಳುವಳಿಯ ವೃತ್ತಿಪರತೆಯಲ್ಲಿ ಅತ್ಯಂತ ನಿರ್ಣಾಯಕ ಹೆಜ್ಜೆಯಾಗಿದೆ.
- AMUL ಪ್ರವರ್ತಕ ತ್ರಿಭುವನದಾಸ್ ಕೆ. ಪಟೇಲ್ ಅವರ ಗೌರವಾರ್ಥವಾಗಿ ಹೆಸರಿಸಲಾದ **TSU** ಭಾರತದ ಸಹಕಾರಿ ಕ್ಷೇತ್ರದ ಬೌದ್ಧಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿ ವಿನ್ಯಾಸಗೊಳಿಸಲಾಗಿದೆ.
- ಸಂಸತ್ತಿನ ಕಾಯ್ದೆಯ **(TSU Act,2025)** ಮೂಲಕ **TSU** ಅನ್ನು ಸ್ಥಾಪಿಸಲಾಗಿದೆ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ ಎಂದು ಘೋಷಿಸಲಾಗಿದೆ.
- ಈ ಸ್ಥಾನಮಾನವು ಸಹಕಾರಿ ಶಿಕ್ಷಣಕ್ಕೆ ಆದ್ಯತೆ ನೀಡುವ ಸರ್ಕಾರದ ಬದ್ಧತೆಯನ್ನು ಒತ್ತಿ ಹೇಳುತ್ತದೆ.

- ಭಾರತದ 8 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಘಗಳ ಅಗಾಧ ಸಾಮರ್ಥ್ಯ–ವರ್ಧನೆಯ ಅಗತ್ಯಗಳನ್ನು ಪರಿಹರಿಸುವ ಮೂಲಕ ವಾರ್ಷಿಕವಾಗಿ ಸುಮಾರು 8 ಲಕ್ಷ ಸಹಕಾರಿ ವೃತ್ತಿಪರರಿಗೆ ತರಬೇತಿ ನೀಡುವುದು TSUನ ಮಹತ್ವಾಕಾಂಕ್ಷೆಯ ಗುರಿಯಾಗಿದೆ.
- ವೈವಿಧ್ಯಮಯ ಸಹಕಾರಿ ಕ್ಷೇತ್ರದ ಮೇಲೆ ಕೇಂದ್ರೀಕರಿಸಿದ ವಿಶೇಷ ಶಾಲೆಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಇವುಗಳಲ್ಲಿ ಹೈನುಗಾರಿಕೆ, ಮೀನುಗಾರಿಕೆ, ಸಕ್ಕರೆ, ಸಹಕಾರಿ ಹಣಕಾಸು, ಗ್ರಾಮೀಣ ಸಾಲ ಸಹಕಾರಿ ಕಾನೂನುಗಳು ಮತ್ತು ಲೆಕ್ಕಪರಿಶೋಧನೆಗಾಗಿ ಕಾಲೇಜುಗಳು
- ಇದರ ಪದವೀಧರರು ಕೇವಲ ವ್ಯವಸ್ಥಾಪಕರಲ್ಲ, ಡೊಮೇನ್ ತಜ್ಞರು ಎಂದು ಇದು ಖಚಿತ ಪಡಿಸುತ್ತದೆ.

## ರಾಷ್ಟ್ರೀಯ ಶಿಕ್ಷಣ ನೀತಿ 2020 ಜೋಡಣೆ

- ಪಠ್ಯಕ್ರಮವು ಎನ್‌ಇಪಿ 2020 ಕ್ಕೆ ಅನುಗುಣವಾಗಿ ಕೌಶಲ್ಯಕ್ಕೆ ಶ್ರೇಣೀಕೃತ ವಿಧಾನವನ್ನು ನೀಡುತ್ತದೆ:
- **ಪದವಿಗಳು (ವ್ಯವಸ್ಥಾಪಕ ಮಟ್ಟ):** ಪೂರ್ಣ ಪ್ರಮಾಣದ ಸ್ನಾತಕೋತ್ತರ ಮತ್ತು ಪದವಿ ಕಾರ್ಯಕ್ರಮಗಳು (ಉದಾ. ಸಹಕಾರಿ ನಿರ್ವಹಣೆ, ಕೃಷಿ–ವ್ಯವಹಾರದಲ್ಲಿ).
- **ಡಿಪ್ಲೊಮಾ(ಮೇಲ್ವಿಚಾರಣಾ ಹಂತ):** ಮಧ್ಯಮ ನಿರ್ವಹಣೆಗೆ ಮಧ್ಯಮ ಅವಧಿಯ ಕೋರ್ಸ್ ಗಳು, ಪ್ರಮಾಣಪತ್ರಗಳು.
- **ಕಾರ್ಯಾಚರಣೆಯ ಮಟ್ಟ:** ತಳಮಟ್ಟದ ಉದ್ಯೋಗಿಗಳಿಗೆ ಕಿರು, ಅಗತ್ಯ–ಆಧಾರಿತ ಕೋರ್ಸ್ ಗಳು (ಉದಾ. ಡಿಜಿಟಲ್ ಅಕೌಂಟಿಂಗ್, ಕಾನೂನು ಅನುಸರಣೆ).

### ಪ್ಯಾನ್–ಇಂಡಿಯಾ ನೆಟ್ ವರ್ಕ್

- ರಾಷ್ಟ್ರೀಯ ಮಟ್ಟದಲ್ಲಿ ವೈಕುಂಠ ಮೆಹ್ತಾ ಇನ್ಸಿಟ್ಯೂಟ್ ಆಫ್ ಕೋಆಪರೇಟಿವ್ ಮ್ಯಾನೇಜೆಂಟ್
- 5 ಪ್ರಾದೇಶಿಕ (RICMಗಳು) ಮತ್ತು ಸಹಕಾರಿ ನಿರ್ವಹಣಾ ಸಂಸ್ಥೆಗಳು
- ದೇಶಾದ್ಯಂತ 14 ಸಹಕಾರಿ ನಿರ್ವಹಣಾ ಸಂಸ್ಥೆಗಳು (ICMಗಳು).

## (ಅಂಕೀಕರಣ) DIGITISATION

- **PACS ಗಣಕೀಕರಣ:** ಭಾರತದ **ERP** ಬೆನ್ನೆಲುಬು
- ಪ್ರಾಥಮಿಕ ಕೃಷಿ ಪತ್ತಿನ ಸಂಘಗಳ ಗಣಕೀಕರಣಕ್ಕಾಗಿ **ಮಿಷನ್–ಮೋಡ್ ಯೋಜನೆ**
- **PACS**ಗಳು ಭಾರತದ ಸಹಕಾರಿ ವ್ಯವಸ್ಥೆಯ ಅಡಿಪಾಯ
- ರೈತರು ಮತ್ತು ಗ್ರಾಮೀಣ ನಾಗರಿಕರಿಗೆ ಪ್ರಾಥಮಿಕ ಸಂಪರ್ಕ ಕೇಂದ್ರಗಳು
- ದೇಶಾದ್ಯಂತ ಸುಮಾರು **73,492 PACS**ಗಳನ್ನು ಗಣಕೀಕರಣಗೊಳಿಸುವ ಬೃಹತ್ ಯೋಜನೆ
- ಸರ್ಕಾರವು ಇದಕ್ಕೆ ಮಂಜೂರು ಮಾಡಿದ ಮೊತ್ತ **2,500 ಕೋಟಿ** ರೂ.ಗೂ ಹೆಚ್ಚು
- **ಏಕೀಕೃತ ERP ಪ್ಲಾಟ್ ಫಾರ್ಮ್:** ಈ ಸಾಫ್ಟ್ ವೇರ್ ಪ್ಲಾಟ್ ಫಾರ್ಮ್ ಎಲ್ಲಾ **PACS** ಗಳಿಗೆ ಡಿಜಿಟಲ್ ಆಪರೇಟಿಂಗ್ ಸಿಸ್ಟಮ್ ಆಗಿ ಕಾರ್ಯನಿರ್ವಹಿಸುತ್ತದೆ.

## ಸಹಕಾರಿ ಪುನರುಜ್ಜೀವನ: ಸಂಪ್ರದಾಯ ಮೀರಿ ವಿಸ್ತರಿಸುವುದು

- ಸಹಕಾರಿ ಮಾದರಿಯನ್ನು ಹೊಸ ಮತ್ತು ಉನ್ನತ–ಬೆಳವಣಿಗೆಯ ಕ್ಷೇತ್ರಗಳಿಗೆ ವಿಸ್ತರಿಸುವುದು
- ಆಧುನೀಕರಣ, ಡಿಜಿಟಲೀಕರಣ ಮತ್ತು ಕೃತಕ ಪ್ರಜ್ಞೆಯ ಜಾಗತಿಕ ಆರ್ಥಿಕತೆಯಲ್ಲಿ ಇದರ ಉಳಿವು ಮತ್ತು ಪ್ರಸ್ತುತತೆಗೆ ಹೊಸ ಕಾರ್ಯತಂತ್ರ ತುಂಬಾ ಅವಶ್ಯಕ.
- PACS ಗಳನ್ನು ಸಾಲದಾತರಿಂದ ಬಹು–ಸೇವಾ ಸಮುದಾಯ ಕೇಂದ್ರವಾಗಿ ಪರಿವರ್ತಿಸುವುದು.
- ಗಿಗ್ ಎಕಾನಮಿ, ಕಾರ್ಮಿಕ ಹಿತ, ಸುಸ್ಥಿರ ಇಂಧನ ಉತ್ಪಾದನೆ ಮತ್ತು ಸ್ಥಳೀಯ ಪ್ರವಾಸೋದ್ಯಮಗಳ ಅಗತ್ಯಗಳನ್ನು ಪೂರೈಸಲು ಸಹಕಾರಿ ರಚನೆಯನ್ನು ವಿಕಸನಗೊಳಿಸುವುದು.

## ಹಸಿರು ಇಂಧನ ಸಹಕಾರ ಸಂಘಗಳಿಗೆ ಕಾರ್ಯತಂತ್ರದ ಸ್ತಂಭಗಳು

- ಸೌರ ಉತ್ಪಾದಕ ಸಹಕಾರಿ ಸಂಘಗಳು
- ಪಿಎಂ–ಕುಸುಮ್ ನಲ್ಲಿ **PACS**
- ಸ್ವಸಹಾಯ ಗುಂಪುಗಳ ಮೂಲಕ ಸಮಗ್ರ ದೇಶೀಯ ಇಂಧನ
- ಆರೋಗ್ಯ ಮತ್ತು ಸ್ವಾಸ್ಥ್ಯ ಸಹಕಾರಿಗಳು
- **PACS**–ಜನೌಷಧಿ ಕೇಂದ್ರ ಸಮನ್ವಯ
- ಅನ್ಯಮಾದರಿಯ ವಿನೂತನ ಸಹಕಾರ ಸಂಘಗಳು

## ಒಟ್ಟಾರೆ ಹೇಳಬೇಕೆಂದರೆ

**ಡಿಜಿಟಲೀಕರಣವು ಸಹಕಾರದ ಆಧುನಿಕ ಸಾಧನವಾಗಿದೆ.**

- ಇದು ವೆಚ್ಚವಲ್ಲ;
- ಇದು ಸಮಾನತೆ, ದಕ್ಷತೆ ಮತ್ತು ಸಬಲೀಕರಣದ ಹೂಡಿಕೆಯಾಗಿದೆ.
- ನಮ್ಮ **PACS** ಗಳನ್ನು ಸ್ಮಾರ್ಟ್ ಮಾಡುವ ಮೂಲಕ,
- ನಮ್ಮ ಡೇಟಾವನ್ನು ಪಾರದರ್ಶಕವಾಗಿಸುವ ಮೂಲಕ ಮತ್ತು
- ನಮ್ಮ ಸೇವೆಗಳು ಲಭ್ಯವಾಗುವಂತೆ ಮಾಡುವ ಮೂಲಕ,
- ಇಡೀ ಸಹಕಾರಿ ಆಂದೋಲನವನ್ನು ಅಂಕೀಕರಿಸಿ ಆತ್ಮನಿರ್ಭರ ಭಾರತಕ್ಕೆ ದೃಢ ಮತ್ತು ವಿಶ್ವಾಸಾರ್ಹ ವೇದಿಕೆಯಾಗಿ ಪರಿವರ್ತಿಸುತ್ತಿದ್ದೇವೆ.

## ಈವರೆಗೆ ಜವಾಬ್ದಾರಿ ನಿರ್ವಹಿಸಿದವರು

### ರಾಜ್ಯಾಧ್ಯಕ್ಷರುಗಳು

1. ದಿ॥ ಶ್ರೀರಾಮ ಭಟ್, ಸ್ಥಾಪಕ ಅಧ್ಯಕ್ಷರು, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ,
2. ಶ್ರೀ ಯು ಎಚ್ ರಾಮಪ್ಪ, ಸಾಗರ, ಶಿವಮೊಗ್ಗ ಜಿಲ್ಲೆ.
3. ದಿ॥ ಶ್ರೀ ನರಸಿಂಹ ನಾಯಕ್, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.
4. ಶ್ರೀ ಎಂ ಜಿ ಪಾಟೀಲ್, ವಿಜಾಪುರ ಜಿಲ್ಲೆ.
5. ಶ್ರೀ ಎಸ್ ಆರ್ ಸತೀಶ್ ಚಂದ್ರ, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.
6. ಶ್ರೀ ರಾಜಶೇಖರ ಶೀಲವಂತ, ಬಾಗಲಕೋಟೆ.
7. ಶ್ರೀ ಪ್ರಭುದೇವ ಆರ್. ಮಾಗನೂರು, ದಾವಣಗೆರೆ.

---

### ರಾಜ್ಯ ಪ್ರಧಾನ ಕಾರ್ಯದರ್ಶಿಗಳು

1. ಶ್ರೀ ಕೊಂಕೋಡಿ ಪದ್ಮನಾಭ, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.
2. ಶ್ರೀ ಗುರುನಾಥ ಜಾಂತೀಕರ್, ಬೀದರ್. (ಎರಡು ಅವಧಿ)
3. ಶ್ರೀ ಎಡಗರೆ ಸುಬ್ರಹ್ಮಣ್ಯ ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.
4. ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ, ಬೆಂಗಳೂರು.
5. ಶ್ರೀ ಮೋಹನದಾಸ ನಾಯಕ್, ಶಿರಸಿ, ಉತ್ತರ ಕನ್ನಡ ಜಿಲ್ಲೆ.
6. ಶ್ರೀ ಸಾಣೂರು ನರಸಿಂಹ ಕಾಮತ್, ಕಾರ್ಕಳ, ಉಡುಪಿ ಜಿಲ್ಲೆ.

---

### ರಾಜ್ಯ ಸಂಘಟನಾ ಕಾರ್ಯದರ್ಶಿಗಳು

1. ಶ್ರೀ ರಮೇಶ್ ವೈದ್ಯ, ಕೊಪ್ಪಳ.
2. ಶ್ರೀ ಎಸ್ ಆರ್ ಸತೀಶ್ ಚಂದ್ರ, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.
3. ಶ್ರೀ ಮಂಜುನಾಥ್ ಬಿ.ಆರ್., ತುಮಕೂರು.
4. ಶ್ರೀ ನವೀನ್, ಹಂಪಿ.
5. ಶ್ರೀ ಮಂಜುನಾಥ್ ಬಿ.ಆರ್., ತುಮಕೂರು.

# ಸಹಕಾರ ಭಾರತಿಯ ವಾರ್ಷಿಕ ಯೋಜನೆ

| | |
|---|---|
| **ಜನವರಿ** | : ಸ್ಥಾಪನಾ ದಿವಸ ಆಚರಣೆ |
| **ಜನವರಿ, ಫೆಬ್ರವರಿ, ಮಾರ್ಚ್** | : 1. ಸದಸ್ಯತಾ ಅಭಿಯಾನ<br>2. ಮಾರ್ಚ್ ಅಂತ್ಯಕ್ಕೆ ಚುನಾವಣೆಗಳು ಜರುಗುವ ಸಹಕಾರ ಸಂಘಗಳ ಕಾರ್ಯಕರ್ತರು ಚುನಾವಣೆ ಬಗ್ಗೆ ಮಾಹಿತಿಗಳನ್ನು ಕಲೆಹಾಕಿ ಪೂರ್ವತಯಾರಿಗಳನ್ನು ನಡೆಸಿ ಚುನಾವಣೆಯಲ್ಲಿ ಪಾಲ್ಗೊಂಡು ದೊಡ್ಡ ಸಂಖ್ಯೆಯಲ್ಲಿ ಸಂಘಗಳ ನಿರ್ದೇಶಕರುಗಳಾಗಲು ಕಾರ್ಯಪ್ರವೃತ್ತರಾಗುವುದು. |
| **ಏಪ್ರಿಲ್, ಮೇ** | : 1. ನೂತನ ನಿರ್ದೇಶಕರುಗಳಿಗೆ ತಾಲ್ಲೂಕು ಜಿಲ್ಲಾ ಮಟ್ಟದಲ್ಲಿ ತರಬೇತಿ.<br>2. ನೂತನ ಸದಸ್ಯರ ಸಮಾವೇಶ<br>3. ಜಿಲ್ಲಾ ಮಟ್ಟದಲ್ಲಿ ಹೊಸ ಸಮಿತಿಗಳ ರಚನೆ ಅಥವಾ ಪುನರ್ ರಚಿಸುವುದು.<br>4. ತಾಲ್ಲೂಕು ಘಟಕಗಳ ಪುನಃರಚನೆ.<br>5. ರಾಜ್ಯ ಜಿಲ್ಲೆ, ತಾಲ್ಲೂಕು, ಸಮಿತಿಗಳ ಲೆಕ್ಕಪತ್ರಗಳ ತಯಾರಿ, ಲೆಕ್ಕ ಪರಿಶೋಧನೆ ಹಾಗೂ ಮೇಲ್ಸ್ತರಕ್ಕೆ ಲೆಕ್ಕಪತ್ರ ಹಸ್ತಾಂತರ. |
| **ಜೂನ್, ಜುಲೈ, ಆಗಸ್ಟ್** | : 1. ಜಿಲ್ಲಾ ಹಾಗೂ ತಾಲ್ಲೂಕು ಅಭ್ಯಾಸವರ್ಗಗಳು<br>2.ಸಮಾವೇಶಗಳು ಹಾಗೂ ಸಂಘಟನಾತ್ಮಕ ಚಟುವಟಿಕೆಗಳು.<br>3. ಪ್ರಾಂತ ಅಭ್ಯಾಸ ವರ್ಗಗಳು |
| **ಸೆಪ್ಟೆಂಬರ್** | : ಸಹಕಾರಿ ಸಂಘಗಳ ಮಹಾಸಭೆಗಳ ಬಗ್ಗೆ ಪೂರ್ವ ತಯಾರಿ ಹಾಗೂ ಸಕ್ರಿಯವಾಗಿ ಪಾಲ್ಗೊಳ್ಳುವುದು. |
| **ಅಕ್ಟೋಬರ್** | : ರಾಜ್ಯಮಟ್ಟದ ಸಹಕಾರ ಸಂಸಾರ, ಸಹಕಾರಿ ಪ್ರವಾಸ. |
| **ನವೆಂಬರ್** | : ಬೇರೆ ಬೇರೆ ಪ್ರಕೋಷ್ಠಗಳ ಸಮಾವೇಶ, ಸಹಕಾರಿ ಸಪ್ತಾಹ ಆಚರಣೆ–ವಿಶೇಷ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ಹಮ್ಮಿಕೊಳ್ಳುವುದು. |
| **ಡಿಸೆಂಬರ್** | : ರಾಜ್ಯಮಟ್ಟದ ಅಭ್ಯಾಸವರ್ಗ (ಜಿಲ್ಲಾ ಮಟ್ಟದ ಪದಾಧಿಕಾರಿಗಳು ಹಾಗೂ ರಾಜ್ಯ ಸಮಿತಿ ಸದಸ್ಯರಿಗೆ) |

**ವಿ.ಸೂ. :** ಜಿಲ್ಲಾ ಸಮಿತಿ ಪದಾಧಿಕಾರಿಗಳು ಪರಿವಾರ ಸಂಘಟನೆಯ ಪ್ರಮುಖರೊಡನೆ **ವರ್ಷದಲ್ಲಿ ಕನಿಷ್ಟ 3 ಬಾರಿ ಸಭೆಗಳನ್ನು** ನಡೆಸಿ ಸಮನ್ವಯತೆ ಕಾಪಾಡುವುದು ಹಾಗೂ ಪರಿವಾರದ ವಿಶೇಷ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು.

# ಸಂಘಟನಾ ಭೂಮಿಕೆ
# ಸಹಕಾರ ಭಾರತಿ ಜಿಲ್ಲಾ ಘಟಕದ ರೂಪುರೇಷೆ...

1. ಪೂರ್ಣ ಪ್ರಮಾಣದ ಜಿಲ್ಲಾ ಸಮಿತಿಯ ರಚನೆ.
2. ನಾಮಫಲಕವನ್ನು ಸಹಕಾರ ಭಾರತಿ, ಹೆಸರು, ಲಾಂಛನ, ಘೋಷವಾಕ್ಯ (ಬಿನಾ ಸಂಸ್ಕಾರ್ ನಹೀ ಸಹಕಾರ್ ಬಿನಾ ಸಹಕಾರ್ ನಹೀ ಉದ್ಧಾರ್) ದೊಂದಿಗೆ ಕಟ್ಟಡದಲ್ಲಿ ಸಾರ್ವಜನಿಕವಾಗಿ ಪ್ರದರ್ಶನ.
3. ಲೆಟರ್‌ಹೆಡ್ ಹೊಂದಿರಬೇಕು.
4. ಎಲ್ಲಾ ಸದಸ್ಯರ ವಿಳಾಸ, ದೂರವಾಣಿ ಸಂಖ್ಯೆಗಳ ದಾಖಲೆ.
5. ಕನಿಷ್ಠ 2 ತಿಂಗಳಿಗೊಮ್ಮೆ ಸಭೆ.
6. ಸಭೆಗಳ ಹಾಜರಾತಿ, ನಿರ್ಣಯಗಳನ್ನು ತೆಗೆದುಕೊಂಡ ಕ್ರಮಗಳ ದಾಖಲೆ.
7. ಜಿಲ್ಲಾ ಎಲ್ಲಾ ತಾಲೂಕುಗಳಲ್ಲಿ ತಾಲೂಕು ಸಮಿತಿ ಮತ್ತು ಸಂಚಾಲಕರ ಆಯ್ಕೆ.
8. ಜಿಲ್ಲೆಯ ಕ್ರೆಡಿಟ್, ಪ್ಯಾಕ್ಸ್, ಹಾಲು ಉತ್ಪಾದಕ, ಹೌಸಿಂಗ್, ಮಹಿಳಾ ಸಹಕಾರಿ ಸಂಘಗಳಿಗೆ ಪ್ರತ್ಯೇಕ ಸೆಲ್ ಪ್ರಮುಖರನ್ನು ಆಯ್ಕೆ ಮಾಡುವುದು.
9. ಜಿಲ್ಲೆಯ ಸಹಕಾರಿ ಸಂಸ್ಥೆಗಳ ಅಂಕಿ ಅಂಶಗಳ ವರದಿಯನ್ನು ಪಡೆದುಕೊಳ್ಳುವುದು.
10. ಸದಸ್ಯತ್ವದ ಬಗ್ಗೆ ಸರಿಯಾದ ಮಾಹಿತಿ.
11. ಕಾಲಕಾಲಕ್ಕೆ ಜಿಲ್ಲಾ ಕಾರ್ಯಕರ್ತರ ಅಭ್ಯಾಸ ವರ್ಗಗಳು, ನಾಯಕತ್ವ ಶಿಬಿರ, ನಿರ್ದೇಶಕರ ತರಬೇತಿ ಕಾರ್ಯಕ್ರಮ, ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಾಗಾರಗಳು ವಿಚಾರ ಗೋಷ್ಠಿ, ನೂತನ ಕಾರ್ಯಕರ್ತರ ತರಬೇತಿ ಶಿಬಿರ, ಸಹಕಾರಿ ಉದ್ಯೋಗಿಗಳ ಶಿಬಿರ ನಡೆಸುವುದು.
12. ಸಹಕಾರಿ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳ ಸಿದ್ದಪಟ್ಟಿ ಕಛೇರಿಯಲ್ಲಿರುವುದು.
13. ಜಿಲ್ಲಾ ಸಮಿತಿಗೆ ಒಂದು ಕಛೇರಿ.
14. ಸಹಕಾರಕ್ಕೆ ಸಂಬಂಧಿಸಿದ ಪತ್ರಿಕೆಗಳು, ಕಾಯ್ದೆ ಪುಸ್ತಕಗಳು, ಮಾದರಿ ನಿಬಂಧನೆಗಳು, ನಿರ್ದೇಶಕರ ಮಾಹಿತಿ ಇತ್ಯಾದಿಗಳ ಸಂಗ್ರಹ.
15. ಹಿರಿಯ ಕಾರ್ಯಕರ್ತರ ಪ್ರವಾಸವನ್ನು ಜೋಡಿಸುವುದು.
16. ನೂತನ ಸಹಕಾರಿ ಸಂಸ್ಥೆಗಳ ರಚನೆಯ ಬಗ್ಗೆ ಪ್ರಯತ್ನ ಮಾಡುವುದು.
17. ಪ್ರತಿಯೊಂದು ಸಹಕಾರಿ ಸಂಸ್ಥೆಗಳಿಗೆ ಕನಿಷ್ಠ ಹತ್ತು ಜನ ಕಾರ್ಯಕರ್ತರು ಇರುವಂತೆ ಪ್ರಯತ್ನ ಮಾಡುವುದು.
18. ಸಹಕಾರಿ ಕ್ಷೇತ್ರದ ಆಗಿಂದಾಗಿನ ಸಂಪೂರ್ಣ ಮಾಹಿತಿ ಕಛೇರಿಯಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುವುದು.
19. ಇಲಾಖಾ ಅಧಿಕಾರಿಗಳೊಡನೆ ಪದಾಧಿಕಾರಿಗಳ ಸಂಪರ್ಕ.
20. ನಿರ್ದೇಶಕರಾಗಿ ಆಯ್ಕೆಯಾದ ಕಾರ್ಯಕರ್ತರು ಸಹಕಾರ ಭಾರತಿಯ ಸಂಘಟನೆ ಹಾಗೂ ಆರ್ಥಿಕ ಕ್ರೋಢೀಕರಣಕ್ಕೆ ಗಮನ ನೀಡುವುದು.
21. ಪದಾಧಿಕಾರಿಗಳು ವಾರದಲ್ಲಿ ಒಮ್ಮೆಯಾದರೂ ನಿರ್ದಿಷ್ಟ ದಿನದಂದು ಕಛೇರಿಗೆ ಭೇಟಿ ನೀಡುವುದು.
22. ಕಛೇರಿಯಲ್ಲಿ ಒಬ್ಬ ಪೂರ್ಣಾವಧಿ ಕಾರ್ಯಕರ್ತ ಇರಬೇಕು. ಆತನಿಗೆ ಸೂಕ್ತ ಸಂಭಾವನೆಯ ವ್ಯವಸ್ಥೆ ಮಾಡುವುದು.
23. ದಿನಂಪ್ರತಿಯ ಆಗುಹೋಗುಗಳನ್ನು ಆತ ಗಮನಿಸಬೇಕು ದೂರವಾಣಿ ಕರೆಗಳಿಗೆ ಸ್ಪಂದಿಸಬೇಕು. ಪದಾಧಿಕಾರಿಗಳನ್ನು ಸಮಾಲೋಚಿಸಿ ಅವಶ್ಯಕ ಕ್ರಮಗಳನ್ನು ಜರುಗಿಸುತ್ತಿರಬೇಕು.

* * *

# ಸಂಘಟನಾ ಮಂತ್ರ

| **ಮಂತ್ರ** | **ಕನ್ನಡ ಭಾವಾನುವಾದ** |
| --- | --- |
| ಓಂ ಸಂ ಗಚ್ಛಧ್ವಂ ಸಂ ವದಧ್ವಂ | ನಾವೆಲ್ಲರೂ ಒಟ್ಟಿಗೆ ಹೆಜ್ಜೆ ಹಾಕೋಣ |
| ಸಂ ವೋ ಮನಾಂಸಿ ಜಾನತಾಮ್ | |
| ದೇವಾ ಭಾಗಂ ಯಥಾ ಪೂರ್ವೇ | |
| ಸಂಜಾನಾನಾ ಉಪಾಸತೇ॥ | ಒಳ್ಳೆಯ ಮಾತುಗಳನ್ನು ಆಡೋಣ |
| ಸಮಾನೋ ಮಂತ್ರಃ ಸಮಿತಿಃ ಸಮಾನೀ | ಒಬ್ಬರನ್ನೊಬ್ಬರು ಅರಿತು ಕಲೆತು ಬಾಳೋಣ |
| | |
| ಸಮಾನಂ ಮನಃ ಸಹ ಚಿತ್ತಮೇಷಾಮ್ | ಒಮ್ಮನಸ್ಸಿನ ಶ್ರದ್ಧಾ ಭಕ್ತಿ ಭಾವಗಳಿಂದ |
| ಸಮಾನಂ ಮಂತ್ರಮಭಿಮಂತ್ರಯೇ ವಃ | ಸತ್ಕರ್ಮಾನುಷ್ಠಾನ ಮಾಡೋಣ |
| ಸಮಾನೇನ ವೋ ಹವಿಷಾ ಜುಹೋಮಿ | ನಮ್ಮ ಕಾರ್ಯ ನಮ್ಮ ಮನಸ್ಸು ನಮ್ಮ ದೇಹ |
| | |
| ಸಮಾನೀ ವ ಅಕೂತಿಃ ಸಮಾನಾ | ಒಂದೆಡೆ ಕೇಂದ್ರೀಕೃತವಾಗಿರಲಿ |
| ಹೃದಯಾನಿ ವಃ | |
| ಸಮಾನಮಸ್ತು ವೋ ಮನೋ | ವಿಶ್ವಶಾಂತಿ ನಮ್ಮ ಏಕೈಕ |
| ಯಥಾ ವಃ ಸುಸಹಾಸತಿ | ಪರಮ ಗುರಿಯಾಗಿರಲಿ |
| | |
| ಓಂ ಶಾಂತಿಃ ಶಾಂತಿಃ ಶಾಂತಿಃ | ಓಂ ಶಾಂತಿಃ ಶಾಂತಿಃ ಶಾಂತಿಃ |

# ಶಾಂತಿ ಮಂತ್ರ

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ ದುಃಖಭಾಗ್ ಭವೇತ್ ॥**
**॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

**ಅರ್ಥ** : ಎಲ್ಲರೂ ಸುಖಿಗಳಾಗಿರಲಿ. ಎಲ್ಲರೂ ಆರೋಗ್ಯವಂತರಾಗಿರಲಿ. ಎಲ್ಲರೂ ಒಳ್ಳೆಯದನ್ನೇ ನೋಡಲಿ. ಯಾರೂ ದುಃಖವನ್ನು ಹೊಂದದಿರಲಿ.

# ಶಾಂತಿ ಮಂತ್ರ

ಸರ್ವೇ ಭವಂತು ಸುಖಿನಃ ಸರ್ವೆ ಸಂತು
ನಿರಾಮಯಾಃ | ಸರ್ವೆ ಭದ್ರಾಣಿ ಪಶ್ಯಂತು
ಮಾ ಕಶ್ಚಿದ್ ದುಃಖಭಾಗ್ ಭವೇತ್ ||
|| ಓಂ ಶಾಂತಿಃ ಶಾಂತಿಃ ಶಾಂತಿಃ ||

ಅರ್ಥ : ಎಲ್ಲರೂ ಸುಖಿಗಳಾಗಿರಲಿ. ಎಲ್ಲರೂ
ಆರೋಗ್ಯವಂತರಾಗಿರಲಿ. ಎಲ್ಲರೂ
ಒಳ್ಳೆಯದನ್ನೇ ನೋಡಲಿ. ಯಾರೂ
ದುಃಖವನ್ನು ಹೊಂದದಿರಲಿ

## ಸಹಕಾರಿ ನೀತಿಗಳು

- ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ
- ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ
- ಆರ್ಥಿಕ ಚಟುವಟಿಕೆಯಲ್ಲಿ ಸದಸ್ಯರ ಪಾಲು
- ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
- ಶಿಕ್ಷಣ ತರಬೇತಿ, ಪ್ರಚಾರ
- ಸಹಕಾರಿ ಸಂಸ್ಥೆಗಳ ನಡುವೆ ಪರಸ್ಪರ ಸಹಕಾರ
- ಸಾಮಾಜಿಕ ಕಳಕಳ

## ಸಹಕಾರ ಧ್ವಜದ ಬಣ್ಣಗಳ ಸಂಕೇತ

- ಸಹಕಾರಿ ಬೇಸಾಯ
- ಸಹಕಾರಿ ಉದ್ದಿಮೆ
- ಸಹಕಾರಿ ಮಾರಾಟ
- ಸಹಕಾರಿ ಪತ್ತು ಮತ್ತು ಹಣಕಾಸು
- ಸಹಕಾರಿ ಶಿಕ್ಷಣ ಮತ್ತು ಪ್ರಚಾರ
- ಮಾನದ ಇತರ ಸಹಕಾರಿ ಚಟುವಟಿಕೆಗಳು
- ಸಹಕಾರಿ ಆರೋಗ್ಯ